ಶ್ರೀ ರಾಮಚಂದ್ರ ಮಿಷನ್®

India ECHOES
ONE WORLD ONE HUMANITY
ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಸಂಚಿಕೆಯ ಪರಿವಿಡಿ

ಗುರುಗಳ ಪ್ರಯಾಣ....................................... ಪುಟ 1–4
ಪ್ರಕಟನೆಗಳು.............................................. ಪುಟ 5
ಪ್ರಾದೇಶಿಕ ಚಟುವಟಿಕೆಗಳು............................ ಪುಟ 6–9
ಪ್ರಭಾಕೇಂದ್ರ............................................. ಪುಟ 10

# ಗುರುಗಳ ಪ್ರವಾಸ

## ರುದ್ರಾಪುರ ಮತ್ತು ಹಲ್ದ್ವಾನಿ

ಗುರುಗಳು ದೆಹಲಿಯಿಂದ ಮೊರಾದಾಬಾದ್ ಮೂಲಕ ಮಂಜುಯುಕ್ತ ದಾರಿಯಲ್ಲಿ ದೂರಪ್ರಯಾಣ ಮಾಡಿ ಜನವರಿ 16 ರಂದು ರುದ್ರಾಪುರಕ್ಕೆ ತಲುಪಿದರು ಹಾಗೂ ಕೂಡಲೇ ಸತ್ಸಂಗವನ್ನೂ ನಡೆಸಿಕೊಟ್ಟರು.

17 ರಂದು ಅವರು ಸತ್ಸಂಗವನ್ನು ನಡೆಸಿ ಉಪಾಹಾರದ ನಂತರ ಹಲ್ದ್ವಾನಿಗೆ ಹೊರಟರು. ಅಲ್ಲಿ ಇತ್ತೀಚೆಗೆ ಆಶ್ರಮ ಮತ್ತು ಅಭ್ಯಾಸಿ ಕಾಲೊನಿಯ ನಿರ್ಮಾಣಕ್ಕಾಗಿ ಜಮೀನನ್ನು ತೆಗೆದುಕೊಳ್ಳಲಾಗಿದೆ.2.25 ಎಕರೆಯ ಆಶ್ರಮದ ಈ ಜಾಗವು ಹಲ್ದ್ವಾನಿ ನಗರ ಕೇಂದ್ರದಿಂದ 5 ಕಿ.ಮೀ. ದೂರದಲ್ಲಿದೆ. 6.5 ಎಕರೆ ಜಾಗದಲ್ಲಿ 'ಸಹಜಪುರಮ್' ಎಂಬ ಅಭ್ಯಾಸಿ ಕಾಲೊನಿಯನ್ನು ಯೋಜಿಸಲಾಗಿದೆ. ಗುರುಗಳು ಪ್ರಸಾದವನ್ನು ಹಂಚಿ, ಭೂಮಿಪೂಜೆಯ ಕಲ್ಲನ್ನು ಅನಾವರಣಗೊಳಿಸಿದರು ಮತ್ತು ಸುಮಾರು 300 ಅಭ್ಯಾಸಿಗಳಿಗಾಗಿ ಸತ್ಸಂಗವನ್ನು ನಡೆಸಿಕೊಟ್ಟರು. ಅವರು ನಂತರ ನೌಕುಚಿಯಾತಲ್‌ಗೆ ಹೋಗಿ ಅಲ್ಲಿನ ಕೆರೆಬದಿಯ ಸುಂದರ ಕುಟೀರದಲ್ಲಿ ಅವರಿಗೆ ಅತ್ಯವಶ್ಯವಾದ ವಿಶ್ರಾಂತಿ ತೆಗೆದುಕೊಂಡರು. ಮರುದಿನ ಗುರುಗಳು ಎಂದಿಗಿಂತ ಉತ್ತಮರಾಗಿದ್ದು ಅವರ ಪಯಣದ ಕಡೇ ಭಾಗವಾದ ಸತ್ಖೋಲ್‌ಗೆ ಹೊರಡಲು ತಯಾರಾಗಿದ್ದರು. ಸ್ಥಳೀಯ ಅಭ್ಯಾಸಿಗಳಿಗೆ ಲಘು ಬೈಠಕ್ ನೀಡಿದ ನಂತರ ಅವರು ಸತ್ಖೋಲ್‌ಗೆ ಹೊರಟರು ಮತ್ತು 11 ಘಂಟೆಗೆ ಅಲ್ಲಿಗೆ ತಲುಪಿದರು.

## ಸತ್ಖೋಲ್

ಗಿರಿ ಪ್ರದೇಶದ ಅಭ್ಯಾಸಿಗಳು ತಮ್ಮ ಪ್ರೀತಿಪಾತ್ರರಾದ ಗುರುಗಳಿಗಾಗಿ ಕಾಯುತ್ತಿದ್ದರು ಮತ್ತು ಅವರನ್ನು ಸ್ವಾಗತಿಸಲು ಹಿಮಾಲಯ ಶ್ರೇಣಿಯ ಅದ್ಭುತ ನೋಟದೊಡನೆ ಜೊತೆಗೂಡಿದರು. ಗುರುಗಳು ದಿನದ ಉಳಿದ ಸಮಯದಲ್ಲಿ ಉಲ್ಲಸಿತರಾಗಿ ಕುಟೀರದಲ್ಲಿ ಕೆಲಸ ಮಾಡಿದರು.

19 ರಂದು ಗುರುಗಳು ಬೆಳಿಗ್ಗೆ 7 ಘಂಟೆಗೆ ಧ್ಯಾನ ಮಂದಿರದಲ್ಲಿ ಸತ್ಸಂಗ ನಡೆಸಿಕೊಟ್ಟರು ಮತ್ತು ಪೂರ್ಣ ದಿನ ಶ್ರಮರಹಿತವಾಗಿ ತಮ್ಮ ಕುಟೀರದಲ್ಲಿ ಕೆಲಸ ಮಾಡುತ್ತಿದ್ದರು.

ಫೆಬ್ರುವರಿ 20 ರ ಬಸಂತ ಪಂಚಮಿಯಂದು ಗುರುಗಳು ಮುಂಜಾನೆ ಬೇಗ ಎದ್ದು, ಹಿಂದಿನ ರಾತ್ರಿಯ ಹಲ್ಲುನೋವಿನ ನಂತರವೂ ಉಲ್ಲಸಿತರಾಗಿ ತಮ್ಮ ಎಂದಿನ ಆಕರ್ಷಣೀಯ ಮಾತುಗಳೊಂದಿಗೆ ರಂಜಿಸಿದರು. 6.45ಕ್ಕೆ ಅವರು ಧ್ಯಾನಮಂದಿರದಲ್ಲಿ ಉಪಸ್ಥಿತರಿದ್ದರು ಮತ್ತು ಪರ್ವತ ಪ್ರದೇಶಗಳಿಂದ ಬಂದ ಅಭ್ಯಾಸಿಗಳೆಲ್ಲಾ ತಮ್ಮ ಸ್ಥಾನಗ್ರಹಣ ಮಾಡಿದ್ದರಿಂದ 7 ಘಂಟೆಗೆ ಸತ್ಸಂಗವನ್ನು ಪ್ರಾರಂಭಿಸಿದರು. ಹಾಜರಾತಿಯು ಸುಮಾರು 700ರಷ್ಟಿದ್ದು ಗುರುಗಳ ಪ್ರಕಾರ ಇಲ್ಲಿಯತನಕ ಸತ್ಖೋಲಿನ ಅತೀ ಹೆಚ್ಚು ಹಾಜರಾತಿ ಸಂಖ್ಯೆಯಾಗಿತ್ತು. ಗುರುಗಳು ಎರಡು ವಿವಾಹಗಳನ್ನು ನೆರವೇರಿಸಿದರು. ಗುರುಗಳ ಕುಟೀರದ ಮುಂದೆ ವನಭೋಜನವನ್ನು ಆಯೋಜಿಸಿದ್ದು ಗುರುಗಳು ಅಭ್ಯಾಸಿಗಳೊಡನೆ ಕಾಲ ಕಳೆದರು. ಅಲ್ಲಿ ಹಬ್ಬದ ವಾತಾವರಣವಿದ್ದಿತು. ಶುಭ್ರ ಆಕಾಶವು ಅಲ್ಲಿನ ತಂಪು ವಾತಾವರಣದಲ್ಲಿ ಆಹ್ಲಾದಕರವಾದ ಬಿಸಿಲನ್ನು ನೀಡಿತು. ಬೆಳಿಗ್ಗೆ ಗುರುಗಳು ಪರ್ವತ ಪ್ರದೇಶದ ಅಭ್ಯಾಸಿಗಳನ್ನು ಭೇಟಿಯಾದರು. ಗೋಪೇಶ್ವರ್‌ನಂಥ ದೂರದ ಕೇಂದ್ರಗಳಿಂದ ಬಂದ ಅಭ್ಯಾಸಿಗಳು ಮೊದಲ ಬಾರಿಗೆ ಗುರುಗಳನ್ನು ಭೇಟಿಯಾದದ್ದು ಹೃದಯಸ್ಪರ್ಶಿಯಾಗಿತ್ತು.

ಅನೌಪಚಾರಿಕ ಸಂಭಾಷಣೆಯಲ್ಲಿನ ನುಡಿಮುತ್ತುಗಳು:

ನನಗೆ ನಂಬಿಕೆ, ಧೈರ್ಯ ಮತ್ತು ಸಹನೆ ಎಲ್ಲಾ ಒಂದೇ. ನಂಬಿಕೆಯು ದೈವಿಕ. ಅವನು ಭಕ್ತನು ತನ್ನಲ್ಲಿ ಬಂದೇ ಬರುವನೆಂಬ ನಂಬಿಕೆಯಿಂದ ಕಾಯುತ್ತಾನೆ. ಧೈರ್ಯಕ್ಕೆ ತನ್ನ ಇರುವಿನ ಅರಿವಿರುವುದಿಲ್ಲ. ಎಂದು ತಾಯಿಯು ತನ್ನ ಕಾಯಿಲೆಗೊಳಗಾದ ಮಗುವನ್ನು ಕರೆದುಕೊಂಡು ಸರಿರಾತ್ರಿ ಹೊರಗೆ ಹೋಗುತ್ತಾಳೋ ಆ ಧೈರ್ಯಕ್ಕೆ ತನ್ನ ಅರಿವಿರುವುದಿಲ್ಲ. ಪ್ರೇಮವು ಆ ಧೈರ್ಯವನ್ನು ತಂದುಕೊಡುತ್ತದೆ.











ಗುರುಗಳ ಕುಟೀರ, ಜೈಪುರ




ಜೈಪುರದಲ್ಲಿ ಚರ್ಚೆ



ಧ್ಯಾನಮಂದಿರದ ಉದ್ಘಾಟನೆ, ಆಲ್ವಾರ್



ಆಲ್ವಾರ್



ಜಬಲ್‌ಪುರ

ನನ್ನೊಂದಿಗೆ ನಡೆಯುತ್ತಿರುವ ಘಟನೆಗಳನ್ನು ಸಂತೋಷದಿಂದ ಸ್ವೀಕರಿಸಬೇಕು. ಯಾವಾಗ ಅವರು ನನ್ನೊಂದಿಗೆ, ನನ್ನೊಳಗೆ ಇದ್ದಾರೋ, ನನ್ನೊಂದಿಗೆ ಕೆಟ್ಟದು ಘಟಿಸುವುದು ಸಾಧ್ಯವಿಲ್ಲ. ಏನೇ ಆಗಲಿ– ಒಳ್ಳೆಯದು ಅಥವಾ ಕೆಟ್ಟದ್ದು– ಅದು ನನ್ನ ಒಳಿತಿಗೇ ಆಗುತ್ತದೆ.

21ರ ಬೆಳಿಗ್ಗೆ ಗುರುಗಳು 7:30 ಕ್ಕೆ ರುದ್ರಾಪುರಕ್ಕೆ ಹೊರಟು, ಅಲ್ಲಿಂದ ಮೊರಾದಾಬಾದ್‌ಗೆ ತೆರಳುವ ಮುನ್ನ ಕೊಂಚ ವಿಶ್ರಾಂತಿ ತೆಗೆದುಕೊಂಡರು. ಮರುದಿನ ಅವರು ದೆಹಲಿಗೆ ಹೊರಟು ಗುರ್‌ಗಾಂವ್‌ನ ವಲಯಾಶ್ರಮ ತಲುಪಿ, ತಮ್ಮ ದೀರ್ಘ ಪ್ರಯಾಣದಿಂದ ಉಂಟಾದ ಆಯಾಸ ಪರಿಹರಿಸಲು ವಿಶ್ರಮಿಸಿದರು. ಸುಮಾರು 750 ಅಭ್ಯಾಸಿಗಳಿಗಾಗಿ ಸೋ. ಅಜಯ್ ಭಟ್ಟರ್‌ರವರು ಸತ್ಸಂಗ ನಡೆಸಿಕೊಟ್ಟರು. ಡಿ.24 ರಂದು ಗುರುಗಳು ಸುಮಾರು 2500 ಅಭ್ಯಾಸಿಗಳಿಗಾಗಿ ಸತ್ಸಂಗ ನಡೆಸಿದರು.

## ಜೈಪುರ

ಗುರುಗಳು ಜೈಪುರಕ್ಕೆ 24 ಜನವರಿಯಂದು ತಲುಪಿದರು. ಸುದೀರ್ಘ ರಸ್ತೆ ಪ್ರಯಾಣದ ನಂತರವೂ ಅವರು ಲವಲವಿಕೆ ಉಳ್ಳವರಾಗಿದ್ದರು. ಅವರು ಆಶ್ರಮಕ್ಕೆ ಬರುತ್ತಿದ್ದಂತೆಯೇ ಅಧಿಕ ಸಂಖ್ಯೆಯಲ್ಲಿ ಅಭ್ಯಾಸಿಗಳು ಅವರನ್ನು ಸ್ವಾಗತಿಸಿದರು. ಆಶ್ರಮದ ಕುಟೀರವು ನಿರ್ಮಾಣ ಹಂತದಲ್ಲಿರುವುದರಿಂದ ಅವರು ಸೋ.ಸುಧೀರ್‌ರವರ ಮನೆಯಲ್ಲಿ ತಂಗಿದರು. ರಾಜಸ್ಥಾನ ಮತ್ತು ಗುಜರಾತಿನಿಂದ ಸುಮಾರು 2900 ಅಭ್ಯಾಸಿಗಳು ಜಮಾಯಿಸಿದ್ದರಿಂದ ವಾತಾವರಣವು ಪ್ರೇಮಭರಿತವಾಗಿತ್ತು. 25ನೇ ತಾರೀಖಿನಂದು ಗುರುಗಳು ನಡೆಸಿದ ಸತ್ಸಂಗದ ನಂತರ ಭಜನೆಗಳನ್ನು ಹಾಡಲಾಯಿತು. ನಂತರ ಅವರು ಆಶ್ರಮ ನಿರ್ಮಾಣ ಕಾರ್ಯಗಳನ್ನು ವೀಕ್ಷಿಸಿದರು, ಅನೇಕ ಅಭ್ಯಾಸಿಗಳನ್ನು ಭೇಟಿ ಮಾಡಿದರು ಮತ್ತು ಅನೇಕ ಪ್ರಸ್ತಾವನೆಗಳ  ನಿರ್ಣಯ ಕೈಗೊಂಡರು. 26ರಂದು ಗುರುಗಳು ಸಂಜೆಯ ಸತ್ಸಂಗವನ್ನು ನಡೆಸಿಕೊಟ್ಟರು. ತಮ್ಮ ದಣಿವಿನ ನಂತರವೂ ಅನೇಕ ಬಾರಿ ಹೊರಬಂದು ಅಭ್ಯಾಸಿಗಳೊಡನೆ ಕಾಲಕಳೆದರು. 27 ರಂದು ಅವರು ಸತ್ಸಂಗವನ್ನು ನಡೆಸಿದ ನಂತರ ಸೋ. ನಿಹಾರಿಕಾರವರಿಂದ ಕವಿತಾ ವಾಚನವಿತ್ತು. ಒಂದು ಚರ್ಚೆಯ ನಡುವೆಅವರು ಹೇಳಿದರು, ಯಾವುದೇ ಯೋಜನೆಯ ಅನುಷ್ಠಾನದ ಮೊದಲು ನಾವು "ಆದರ್ಶ, ಸಾಧ್ಯತೆ ಮತ್ತು ಶಕ್ಯತೆ"ಗಳನ್ನು ಪರಿಗಣಿಸಬೇಕು. 28ರ ಮುಂಜಾನೆ ಗುರುಗಳು ಆಲ್ವಾರಕ್ಕೆ ಹೊರಟರು.

## ಆಲ್ವಾರ್

ಗುರುಗಳು ಆಶ್ರಮದ ಉದ್ಘಾಟನೆಗೆಂದು ಆಶ್ರಮದಲ್ಲಿಯೇ ತಂಗಿದರು. 500 ಅಭ್ಯಾಸಿಗಳು ಅವರನ್ನು ಸಂಭ್ರಮ, ಉತ್ಸುಕತೆ ಮತ್ತು ಭಕ್ತಿಯಿಂದ ಎದುರುಗೊಂಡರು. ಆಶ್ರಮದ ದಕ್ಷಿಣದ್ವಾರದಲ್ಲಿರುವ ಉದ್ಘಾಟನಾ ಕಲ್ಲನ್ನು ಗುರುಗಳು ಅನಾವರಣಗೊಳಿಸಿದರು. ತದನಂತರ ಟೇಪು ಕತ್ತರಿಸಿ ಧ್ಯಾನಮಂದಿರವನ್ನು ಪ್ರವೇಶಿಸಿದರು. ಅವರು ಸುಮಾರು 50 ನಿಮಿಷಗಳ ಕಾಲ ಸತ್ಸಂಗವನ್ನು ನಡೆಸಿದರು ಮತ್ತು ಆಶ್ರಮದ ನಿವೇಶನದಲ್ಲಿ ಅರ್ಧ ಘಂಟೆಗೂ ಹೆಚ್ಚು ಕಾಲ ಉಳಿದು ಅಭ್ಯಾಸಿಗಳು ಅವರನ್ನು ಭೇಟಿಯಾಗಲು ಅವಕಾಶ ನೀಡಿದರು. ಮಧ್ಯಾಹ್ನ ಭೋಜನದ ನಂತರ ಕೆಲಕಾಲ ವಿಶ್ರಾಂತಿ ತೆಗೆದುಕೊಂಡು ಅವರು ನಂತರ ಕಾರಿನಲ್ಲಿ ದೆಹಲಿಗೆ ಹೊರಟರು. ಅವರು ಆಲ್ವಾರದ ಅಭ್ಯಾಸಿಗಳಿಗೆ ಮತ್ತೊಮ್ಮೆ ಬರುವೆನೆಂದು ಭರವಸೆ ನೀಡಿದರು.

## ಜಬಲ್ಪುರ

ಗುರುಗಳು ಜನವರಿ 30ರಂದು ದೆಹಲಿಯಿಂದ ಜಬಲ್‌ಪುರಕ್ಕೆ ವಿಮಾನಪ್ರಯಾಣ ಮಾಡಿದರು. ಅವರು ತಂಗಲಿರುವ ಸ್ಥಳಕ್ಕೆ ಬರುತ್ತಿರುವಂತೆ ಸುಮಾರು 2000 ಅಭ್ಯಾಸಿಗಳು ರಸ್ತೆಯ ಎರಡೂ ಬದಿಯಲ್ಲಿ ನಿಂತು ಸ್ವಾಗತ ಕೋರಿದರು. 31ರಂದು ಮಧ್ಯಪ್ರದೇಶದ ವಲಯಾಶ್ರಮ ಉದ್ಘಾಟನೆಯಿಂದ ಮೂರುದಿನಗಳ ಬಸಂತ್ ಉತ್ಸವ ಪ್ರಾರಂಭವಾಯಿತು. ಧ್ಯಾನಮಂದಿರವನ್ನು ಪುರಾತನ ಬ್ರಿಟಿಷ್ ಶೈಲಿಯಲ್ಲಿ ನಿರ್ಮಿತಗೊಳಿಸಲಾಗಿದ್ದು ಗುರುಗಳಿಗೆ ಅದನ್ನು ಕಂಡು ತಾವು ಓದಿದ್ದ ಕ್ರೈಸ್ತ ಚರ್ಚ್ ಶಾಲೆಯ ನೆನಪು ಬಂದಿತು. ಅವರು ಅತ್ಯದ್ಭುತ ಧ್ಯಾನಮಂದಿರವನ್ನು ಕಲ್ಲನ್ನು ಅನಾವರಣಗೊಳಿಸುವ ಮತ್ತು ಟೇಪನ್ನು ಕತ್ತರಿಸುವ ಮೂಲಕ ಉದ್ಘಾಟಿಸಿದರು. ಗುರುಗಳು ತಮ್ಮ ಸ್ಥಾನಗ್ರಹಣ ಮಾಡುವ ತನಕ ಅಭ್ಯಾಸಿಗಳು ಧ್ಯಾನಮಂದಿರವನ್ನು ಪ್ರವೇಶಿಸಲು ಕಾಯ್ದರು. ಸತ್ಸಂಗದ ನಂತರ ಹೃದಯಸ್ಪರ್ಶಿ ಭಜನೆಗಳನ್ನು ಹಾಡಲಾಯಿತು, ನಂತರ ಗುರುಗಳು ಕಾರಿನಲ್ಲಿ ಆಶ್ರಮದ ಆವರಣದಲ್ಲಿ ತಿರುಗಾಡಿದರು. ಛಳಿಯಲ್ಲಿ ಟೆಂಟುಗಳಲ್ಲಿ ಇರಬೇಕಾಗಿ ಬಂದರೂ ಅಭ್ಯಾಸಿಗಳು ಸಂತೋಷದಿಂದ ಅನುಗ್ರಹಿತರಾದಂತೆ ಭಾವಿಸಿದರು. ಆ ವಾತಾವರಣವು ದೈವೀ ಸರೋವರಗಳಲ್ಲೊಂದಾಗಿತ್ತು. ಆಶ್ರಮದ ರಚನೆ ಮತ್ತು ವ್ಯವಸ್ಥೆಗಳು ಸಣ್ಣ ಆರಾಮದಾಯಕ ವಸತಿ, ಪುಸ್ತಕ ವಿಭಾಗ, ಗ್ರಂಥಾಲಯ ಮತ್ತು ಮಕ್ಕಳ ಕೇಂದ್ರಗಳೊಂದಿಗೆ ಉತ್ತಮವಾಗಿದ್ದವು.

2ನೇ ಫೆಬ್ರುವರಿಯಂದು ಗುರುಗಳು ಧ್ಯಾನಮಂದಿರದಲ್ಲಿ ಆಗಮಿಸಿದಾಗ ಸಮಯಕ್ಕೆ ಸರಿಯಾಗಿ ಎಲ್ಲರೂ ಬಂದು ಕುಳಿತಿದ್ದನ್ನು ಕಂಡು ಆನಂದಿತರಾದರು. ಅವರು "ಎಲ್ಲರೂ ಆದಷ್ಟು ಬೇಗ ಸ್ಥಾನಗ್ರಹಣ ಮಾಡಿ" ಎಂದರು.





ಜಬಲ್‌ಪುರ

ನಂತರ ಗಡಿಯಾರವನ್ನು ನೋಡುತ್ತಾ ಮುಗುಳ್ನಗೆಯಿಂದ ಹೇಳಿದರು, “ ಖಾನೇ ಕಿ ಟೇಬಲ್ ಪರ್ ಆಪ್ ಕಿತ್‌ನಿ ದೇರ್ ವೇಯ್ಟ್ ಕರ್ ಸಕ್ತೇ ಹೋ, ಅರೇ ಭಾಯ್ ಜಲ್ದೀ ಸೆ ಖಾನಾ ದೀಜಿಯೇ, ಯಹಾಂ ಭೀ ಐಸೇ ಹಿ ಹೈ, ಹಮ್ ಅಬ್ ರುಕ್ ನಹೀ ಸಕ್ತೇ, ಶುರೂ ಕರ್‌ನಾ ಹೀ ಹೋಗಾ”. (ಊಟದ ಮೇಜಿನಲ್ಲಿ ಕುಳಿತ ಮೇಲೆ ಯಾರಾದರೂ ಎಷ್ಟು ಹೊತ್ತು ತಾನೇ ಕಾಯಲು ಸಾಧ್ಯ? ಇಲ್ಲಿಯೂ ಅದೇ ತರಹ. ಇನ್ನು ನಾನು ಕಾಯಲು ಸಾಧ್ಯವಿಲ್ಲ, ಪ್ರಾರಂಭಿಸಲೇಬೇಕು.)

ಸತ್ಸಂಗದ ನಂತರ ಸೋ.ಅಜಯ್‌ರವರು ನಿಯಮಿತ ಸಾಧನೆಯ ಅಗತ್ಯತೆಯ ಬಗ್ಗೆ ಒತ್ತಿ ಹೇಳುತ್ತಾ, ನಮ್ಮ ಗುರಿಯನ್ನು ಯಾವಾಗಲೂ ದೃಷ್ಟಿಯಲ್ಲಿಟ್ಟುಕೊಳ್ಳಬೇಕು ಮತ್ತು ಭಂಡಾರಗಳಲ್ಲಿ ಗುರುಗಳು ದಯಪಾಲಿಸಿದ ಸ್ಥಿತಿಯನ್ನು ಕಾಯ್ದಿಟ್ಟುಕೊಳ್ಳಬೇಕೆಂದು ಹೇಳಿದರು. ಅವರು ಗುರುಗಳ ಹೊಸವರ್ಷದ ಸಂದೇಶವನ್ನು ನೆನಪಿಸುತ್ತಾ ಎಲ್ಲರ ಹೃದಯದಲ್ಲಿ ಗುರಿಯ ಬಗ್ಗೆ ಅವಸರದ ಭಾವನೆ ತಂದುಕೊಳ್ಳಲು ಹೇಳಿದರು.

ಗುರುಗಳು ಸಂಜೆಯ ಸತ್ಸಂಗದ ನಂತರ ನೀಡಿದ ಉಪನ್ಯಾಸದಲ್ಲಿ ಹೇಳಿದರು, “ಶಿಸ್ತನ್ನು ಪರಿಪಾಲಿಸುವವನೇ ಶಿಷ್ಯ; ಅವನು ತನ್ನ ಹೃದಯದಿಂದ ಶಿಸ್ತುಬದ್ಧ, ಮನದಿಂದಲ್ಲ; ಅವನು ಶಿಸ್ತುಬದ್ಧನಾಗಿರುವುದನ್ನು ಪ್ರೀತಿಸುತ್ತಾನೆ, ಭಯದಿಂದಲ್ಲ; ಎಲ್ಲಕ್ಕಿಂತ ಹೆಚ್ಚಾಗಿ ಶಿಸ್ತಿನಿಂದಲೇ ತಾನು ನಡೆಯುವ ಹಾದಿಯ ಗಮ್ಯವನ್ನು ಯಶಸ್ವಿಯಾಗಿ ಮುಟ್ಟಬಹುದೆಂದು ಅವನಿಗೆ ತಿಳಿದಿದೆಯಾದ್ದರಿಂದಲೇ ಅವನು ಶಿಸ್ತುಬದ್ಧನಾಗಿರುತ್ತಾನೆ.”

ಸುಮಾರು 3800 ಅಭ್ಯಾಸಿಗಳು ಮತ್ತು 300 ಮಕ್ಕಳು ಈ ಬಸಂತೋತ್ಸವದಲ್ಲಿ ಪಾಲ್ಗೊಂಡಿದ್ದರು.

## ನಾಗ್ಪುರ

3ನೇ ತಾರೀಖಿನ ಬೆಳಿಗ್ಗೆ ಗುರುಗಳು ನಾಗ್ಪುರಕ್ಕೆ ರಸ್ತೆ ಮುಖೇನ ಹೊರಟರು. ಹಾದಿಯಲ್ಲಿ ಅವರು ಸಿಯೋನಿಯಲ್ಲಿ ನಿಂತರು, ಅಲ್ಲಿ 300 ಅಭ್ಯಾಸಿಗಳು ಅವರಿಗಾಗಿ ಕಾಯುತ್ತಿದ್ದರು. ಅವರು ಬಿಸಿಲಿನಲ್ಲಿ ಕುಳಿತು ಉಪಸ್ಥಿತರಿದ್ದ ಎಲ್ಲರೊಡನೆ ಅದರಲ್ಲೂ ಮಕ್ಕಳೊಡನೆ ಉಲ್ಲಸಿತರಾಗಿ ಮಾತನಾಡಿದರು. ಭೋಜನದ ನಂತರ ಅವರು ನಾಗ್ಪುರಕ್ಕೆ ಹೊರಟರು ಮತ್ತು ಅಲ್ಲಿ ನಗರದಿಂದ 12 ಕಿ.ಮೀ. ದೂರದಲ್ಲಿರುವ ಆಶ್ರಮಕ್ಕೇ ನೇರವಾಗಿ ಹೋಗಲು ತೀರ್ಮಾನಿಸಿದರು.

ಅಲ್ಲಿ ನೆರೆದಿದ್ದ ಸುಮಾರು 1200 ಅಭ್ಯಾಸಿಗಳಿಗೆ ಗುರುಗಳನ್ನು ಕಂಡು ಆಶ್ಚರ್ಯದೊಡನೆ ಆನಂದವಾಯಿತು. ಆರೂವರೆ ಘಂಟೆಯ ಆಯಾಸಕರ ಪ್ರಯಾಣದ ನಂತರ ಗುರುಗಳು ಕೊಂಚ ವಿಶ್ರಾಂತಿ ತೆಗೆದುಕೊಂಡು ನಂತರ ಸತ್ಸಂಗ ನಡೆಸಲು ಧ್ಯಾನಮಂದಿರಕ್ಕೆ ಆಗಮಿಸಿದರು. ಸತ್ಸಂಗದ ನಂತರ ಚಿಕ್ಕದಾದ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಲು ಉಳಿದುಕೊಂಡರು. ಆಶ್ರಮದಲ್ಲಿ ಭೋಜನ ಮಾಡಿದ ನಂತರ ಅವರು ಅಭ್ಯಾಸಿಯೊಬ್ಬರ ಮನೆಗೆ ರಾತ್ರಿ ತಂಗಲು ತೆರಳಿದರು.

4ನೇ ತಾರೀಖಿನಂದು ಬೆಳಿಗ್ಗೆ ಅವರು ಆಶ್ರಮದ ಪಕ್ಕದಲ್ಲಿರುವ ಹೌಸಿಂಗ್ ಕಾಲನಿಯ ಕಾಗದ ಪತ್ರಗಳನ್ನು ಹಂಚಿದರು. 'ಆತ್ಮದ ಪಯಣ' ಎನ್ನುವ ಸುಂದರ ನೃತ್ಯಪ್ರದರ್ಶನ ಮಾಡಲಾಯಿತು.

ಗುರುಗಳು ತಂಗಿದ ಮನೆಯು ಸುಮಾರು ನೂರು ವರ್ಷ ಹಳೆಯದಾಗಿದ್ದು ಅವರ ಜಬಲ್ಪುರದ ಮನೆಯನ್ನು ಹೋಲುತ್ತದೆ. ಮೊದಲ ಕಾಲದಲ್ಲಿ ಜನರು ವಿಶಾಲ ಹೃದಯಿಗಳಾಗಿರುತ್ತಿದ್ದರು, ಆದ್ದರಿಂದ ಅವರು ದೊಡ್ಡ ಮನೆಗಳನ್ನು ಕಟ್ಟಿಸುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ನಮ್ಮ ಸಣ್ಣಮನಸ್ಸಿನೊಂದಿಗೇ ನಮ್ಮ ಮನೆಗಳೂ ಕುಗ್ಗಿವೆ ಎಂದು ಅವರು ಹೇಳಿದರು.

ಬಹು ದಿನಗಳಿಂದ ನಿರೀಕ್ಷಿಸುತ್ತಿದ್ದ ಗುರುಗಳ ನಾಗ್ಪುರದ ಭೇಟಿಯು ಕೇಂದ್ರದ ಉನ್ನತಿಗೆ ಖಂಡಿತವಾಗಿಯೂ ಸಹಕಾರಿಯಾಗಲಿದೆ.

## ಕೊಲ್ಕಾತಾ

4ನೇ ಫೆಬ್ರುವರಿಯಂದು ಅಭ್ಯಾಸಿಗಳ ದಂಡು ಗುರುಗಳಿಗಾಗಿ ಕೊಲ್ಕಾತಾ ವಿಮಾನನಿಲ್ದಾಣದಲ್ಲಿ ಕಾಯುತ್ತಿತ್ತು. ಅವರು 7.20ಕ್ಕೆ ಸುಮಾರು 100 ಅಭ್ಯಾಸಿಗಳೊಂದಿಗೆ (ಅವರಲ್ಲಿ 90 ವಿದೇಶೀ ಅಭ್ಯಾಸಿಗಳು) ಬಂದಿಳಿದರು ಹಾಗೂ ನೇರವಾಗಿ ಆಶ್ರಮಕ್ಕೇ ತೆರಳಿದರು. ಫೆಬ್ರುವರಿ 5 ರಂದು ಅವರು 800 ಅಭ್ಯಾಸಿಗಳಿಗಾಗಿ ಸತ್ಸಂಗವನ್ನು ನಡೆಸಿದರು.

ಫೆಬ್ರುವರಿ 6 ರಂದುಸತ್ಸಂಗದ ನಂತರ ಸೋ. ಎನ್.ಪ್ರಕಾಶ್ ಮತ್ತು ಸೋ. ಪ್ಯಾಟ್ರಿಕ್‌ರವರು ಪ್ರಶ್ನೋತ್ತರ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅದೊಂದು ಅದ್ಭುತ ಮತ್ತು ಅರಿವುದಾಯಕ ಅನುಭವವಾಗಿದ್ದು ಗುರುಗಳ ಉಪಸ್ಥಿತಿಯು ಪೂರ್ಣ ಕಾರ್ಯಕ್ರಮದಲ್ಲಿ ಭಾಸವಾಯಿತು. ಪಾಕಶಾಲೆಯ ಸ್ವಯಂಸೇವಕರು ಗುರುಗಳನ್ನು ರಾತ್ರಿಯ ಭೋಜನಕ್ಕೆ ಆಹ್ವಾನಿಸಿದಾಗ ಅವರು ಸ್ವೀಕರಿಸಿದರು ಮತ್ತು ಆ ಸಂಜೆ ಅವರು ಅಭ್ಯಾಸಿಗಳ ನಡುವೆಯೇ ಭೋಜನ ಮಾಡಿದರು.

ನಾಗ್ಪುರ



ಕೊಲ್ಕಾತಾ






7ನೇ ಫೆಬ್ರುವರಿಯಂದು ಸತ್ಸಂಗಕ್ಕೆ ಮೊದಲೇಗುರುಗಳು ಉಪನ್ಯಾಸ ನೀಡಿದರು ಹಾಗೂ ಮತ್ತೊಮ್ಮೆ ಶಿಸ್ತಿನ ಮಹತ್ವವನ್ನು ಒತ್ತಿ ಹೇಳಿದರು. ಅವರು ಹೇಳಿದರು, ಸತ್ಸಂಗವು ಬಲು ಮುಖ್ಯ, ಅದರೊಡನೆ ದೈನಂದಿನ ಅಭ್ಯಾಸವು ಅದಕ್ಕಿಂತಲೂ ಮುಖ್ಯ ಮತ್ತು ಅದನ್ನು ಯಾವುದೇ ಕಾರಣಕ್ಕೂ ತಪ್ಪಿಸಬಾರದು. ಹತ್ತು ನಿಯಮಗಳನ್ನೂ ನಮ್ಮ ದೈನಿಕ ಜೀವನದಲ್ಲಿ ಎಲ್ಲಾ ಸಂದರ್ಭಗಳಲ್ಲಿಯೂ ಪಾಲಿಸುವಂತೆ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಅವರು ಎಲ್ಲರಲ್ಲಿಯೂ ತಮ್ಮ ಆಧ್ಯಾತ್ಮಿಕ ಮತ್ತು ಲೌಕಿಕ ಜೀವನದಿಂದ ಇರುವ ನಿರೀಕ್ಷೆಗಳ ನಡುವೆ ಸರಿಯಾದ ವ್ಯತ್ಯಾಸ ಕಂಡುಕೊಳ್ಳುವಂತೆ ಆಗ್ರಹಿಸಿದರು. ಅನೇಕ ಜನ ತಮ್ಮೊಂದಿಗೆ ಅನಾಹುತ ನಡೆದಾಗ ಮಿಷನ್ನನ್ನು ಬಿಟ್ಟು ಹೊರನಡೆಯುತ್ತಾರೆ. ಆದರೆ ಆ ರೀತಿ ನಡೆದುಕೊಳ್ಳಬಾರದು, ಏಕೆಂದರೆ ನಮ್ಮ ಲೌಕಿಕ ಜೀವನದಲ್ಲಿ ಏನೇ ಆಗಲಿ, ಸುಖ-ದುಃಖಗಳನ್ನು ಸೇರಿ, ಅದು ಕೇವಲ ನಮ್ಮ ಸಂಸ್ಕಾರಗಳಿಂದ ಮಾತ್ರವೇ.

ಸತ್ಸಂಗದ ನಂತರ ಸೋ. ಅಪರ್ಣಾ ಘೋಷ್‌ರವರಿಂದ ಕೆಲವು ಭಜನೆಗಳನ್ನು ಕೇಳಲಾಯಿತು. ನಂತರ ಗುರುಗಳು ಸೋ. ಅಜಯ್ ಭಟ್ಟರ್‌ರವರ ನಿವಾಸಕ್ಕೆ ತೆರಳಿ ಮುಂದಿನ 3 ದಿನಗಳು ಅಲ್ಲಿಯೇ ಉಳಿದುಕೊಂಡರು. ಅಲ್ಲಿರುವ ತನಕ ಅವರು ಅಭ್ಯಾಸಿಗಳೊಂದಿಗೆ ಭೇಟಿ, ಆಡಳಿತಾತ್ಮಕ ವಿಷಯ ನಿರ್ವಹಣೆಯೊಂದಿಗೆ ಸತ್ಸಂಗಗಳನ್ನೂ ನಡೆಸಿಕೊಟ್ಟರು. ಗುರುಗಳು 10ನೇ ಫೆಬ್ರುವರಿಯಂದು ಚೆನ್ನೈಗೆ ವಾಯುಮಾರ್ಗದಿಂದ ಬಂದು ತಲುಪಿದರು.

## ಹೊಸ ಪ್ರಕಟನೆಗಳು


ದಿ ಗುರು ಆ್ಯಂಡ್ ದಿ ಗೋಲ್





ಹೃದಯವಾಣಿ 2005





ಮಾನವ ಪ್ರಗತಿಯಲ್ಲಿ ಗುರುಗಳ ಪಾತ್ರ(ತೆಲುಗು)




ನನ್ನ ಗುರುದೇವ (ಹಿಂದಿ)





ರಿಯಾಲಿಟಿ ಅಟ್ ಡಾನ್





ಟ್ರುಥ್ ಎಟರ್ನಲ್





ಟ್ರುಥ್ ಎಟರ್ನಲ್(ತಮಿಳು)





ಹಿ ದ ವಂಡರ್- ಸಂ.2 (ಹಿಂದಿ)




ನನ್ನ ಗುರುದೇವ (ಮಲಯಾಳಮ್)




ಅಭ್ಯಾಸಿ ಡೈರಿ




## ಅಭ್ಯಾಸಿ ತರಬೇತಿ ಕಾರ್ಯಕ್ರಮಗಳು

### ಪನ್‌ವೇಲ್, ಮುಂಬೈ

25ರಿಂದ 27ನೇ ಡಿಸೆಂಬರ್‌ನವರೆಗೆ ನಡೆದ ಜ್ಞಾನ ಹಂಚಿಕೆಯ ಸಭೆಯಲ್ಲಿ 35 ಅಭ್ಯಾಸಿಗಳು ಪಾಲ್ಗೊಂಡರು. ಮೊದಲ ದಿನದ ಪುಸ್ತಕ ವಾಚನ ಕಾಲದಲ್ಲಿ ಸತ್ಯೋದಯದ ಅಧ್ಯಾಯಗಳನ್ನು ಹಿಂದಿ ಮತ್ತು ಆಂಗ್ಲ ಭಾಷೆಯಲ್ಲಿ ಓದಲಾಯಿತು. ಗುರುಗಳ ವಿಡಿಯೋ 'ಸೀ ಆಫ್ ಲವ್'ವನ್ನು ತೋರಿಸಲಾಯಿತು. ಎರಡನೇ ದಿನವು ಸಹಜಮಾರ್ಗ ಸಾಧನೆಯ ಬಗ್ಗೆ ಉಪನ್ಯಾಸಗಳು ಮತ್ತು ಸ್ವಯಂಸೇವೆಗಳನ್ನು ಒಳಗೊಂಡಿತ್ತು. ಕಾರ್ಯಕ್ರಮದ ಕೊನೆಯ ದಿನದಂದು ಅಭ್ಯಾಸಿಗಳ ಅಭಿಪ್ರಾಯ ಪ್ರಸ್ತುತಿಯಿಂದ ಪ್ರಾರಂಭವಾಗಿ ಸಹನೆ, ಪ್ರೇಮ ಮತ್ತು ಶಿಸ್ತು ಕುರಿತು ಆಶುಭಾಶಣ ನಡೆಸಲಾಯಿತು. ದಿನದ ಕೊನೆಯಲ್ಲಿ ಅಭ್ಯಾಸಿಗಳು ಗುರೊರೊಂದಿಗಿನ ತಮ್ಮ ಮೊದಲನೇ ಭೇಟಿಯ ಅನುಭವಗಳನ್ನು ಹಂಚಿಕೊಂಡರು. ಕಾರ್ಯಕ್ರಮದ ವಿಷಯವು 'ಮ', ಅಂದರೆ ನಮ್ಮಲ್ಲಿ ನಾವು ಮೂರು M (ಮಿಷನ್, ಮಾಸ್ಟರ್,ಮೆಥಡ್) ಗಳ ಬಗ್ಗೆ ಬದಲಾವಣೆಯನ್ನು ತರಬೇಕು ಎಂದು. ಇದನ್ನು ಮೂರು ದಿನಗಳಲ್ಲಿ ಪರಿಣಾಮಕಾರಿಯಾಗಿ ತಿಳಿಸಲಾಯಿತು.


## ಭುಜ್ ಆಶ್ರಮ, ಅಡಿಗಲ್ಲು ಹಾಕುವ ಕಾರ್ಯಕ್ರಮ

ಭುಜ್ ಕೇಂದ್ರದ ಪ್ರಶಿಕ್ಷಕರಾದ ಡಾ. ಎನ್.ಒ. ಚೌಹಾನ್‌ರವರು 24 ಜನವರಿಯಂದು ಆಶ್ರಮದ ಅಡಿಗಲ್ಲನ್ನು ಹಾಕಿದರು. ನಿವೇಶನ ಸ್ಥಳದಲ್ಲಿದ್ದ 75ಕ್ಕೂ ಹೆಚ್ಚು ಅಭ್ಯಾಸಿಗಳು ಈ ಸಂದರ್ಭದಲ್ಲಿ ಗುರುಗಳ ಉಪಸ್ಥಿತಿಯನ್ನು ಅನುಭವಿಸಿದರು. ಆಶ್ರಮದ ಈ ಸ್ಥಳವು 9787.3 ಚ.ಯಾರ್ಡ್‌ನಷ್ಟಿದ್ದು ಇದನ್ನು ಸಿಟಿ ಸ್ಕ್ವಯರ್ ಟೌನ್‌ಶಿಪ್‌ನವರು 2005ನೇ ಇಸವಿಯಲ್ಲಿ ದೇಣಿಗೆ ನೀಡಿದ್ದರು. ಇದು ಭುಜ್ ಶಹರದಿಂದ ಸುಮಾರು 12 ಕಿ.ಮೀ. ದೂರದಲ್ಲಿದೆ.



## ಪೂಜ್ಯ ಗುರುಗಳ 84ನೇ ಹುಟ್ಟುಹಬ್ಬ ಆಚರಣೆ

ದಿನಾಂಕ: 23 ರಿಂದ 26 ನೇ ಜುಲೈ, 2010
ಸ್ಥಳ: ಬಾಬೂಜಿ ಸ್ಮಾರಕ ಆಶ್ರಮ,
ಶ್ರೀ ರಾಮಚಂದ್ರ ಮಿಶನ್, ಐಐಎಂ ರಸ್ತೆ
ಲಕ್ನೋ (ಉ.ಪ್ರ), ಭಾರತ




ಪ್ರಿಯ ಸಹೋದರ- ಸಹೋದರಿಯರೇ,

ಪ್ರಣಾಮಗಳು. ಗುರುಗಳ ಹೇಳಿಕೆಯಂತೆ "ಇದು(ಭಂಡಾರ) ಸರೋವರದ ಅತ್ಯಂತ ಸುಗಂಧಿತ ಮತ್ತು ತಂಪು ನೀರಿನಲ್ಲಿ ಮೀಯ್ದಂತೆ, ಅದು ತನ್ನಲ್ಲಿ ಮೀಯುವ ಅಭ್ಯಾಸಿಯ ಆಧ್ಯಾತ್ಮಿಕ ನವೀಕರಣವನ್ನು, ನಿಜವಾಗಿ ಅದರಲ್ಲಿ ಮುಳುಗಿಸುವ ಮೂಲಕ ಸಾಧ್ಯವಾಗಿಸುತ್ತದೆ-ಅದನ್ನು ಸಾಧ್ಯವಾಗುವಂತೆ ಮಾಡಲಾದರೆ."

ನಮ್ಮ ಪೂಜ್ಯ ಗುರುಗಳ 84ನೇ ಹುಟ್ಟುಹಬ್ಬದ ಸಂದರ್ಭದಂದು ಅವರ ಅಪರಿಮಿತ ಅನುಗ್ರಹದ ವಿಶಾಲ ವಿಸ್ತಾರದಲ್ಲಿ ನಾವು ಮುಳುಗಲು ಅವಕಾಶ ಮಾಡಿ ಕೊಡುತ್ತಿರಲು ಗುರುಗಳಿಗೆ ನಾವು ಕೃತಜ್ಞರು. ಭಂಡಾರವು 22ರಿಂದ 26ರ ನಡುವಿನ ಕಾಲದಲ್ಲಿ ಲಖನೌ ಪಟ್ಟಣದಲ್ಲಿ ನಡೆಸಲಾಗುವುದು ಹಾಗೂ 25 ಜುಲೈಯಂದು ಗುರುಪೂರ್ಣಿಮೆಯಂತಹ ಪುಣ್ಯದಿನವನ್ನು ನಮ್ಮ ಪೂಜ್ಯ ಗುರುಗಳೊಂದಿಗೆ ಭೌತಿಕ ಮತ್ತು ದೈವೀಲೋಕದಲ್ಲಿ ಆಚರಿಸೋಣ.

....ನಾವು ಜೀವಿಸುವ ಪ್ರತೀ ಕ್ಷಣವೂ, ನಾವು ತೆಗೆದುಕೊಳ್ಳುವ ಪ್ರತೀ ಉಸಿರೂ ನಮ್ಮ ಪೂಜ್ಯ ಗುರುಗಳು ನಮಗೆ ಅನುಮತಿ ಕೊಟ್ಟ ಅಸ್ತಿತ್ವಕ್ಕಾಗಿ ಕೃತಜ್ಞತೆಗಳನ್ನು ಉಚ್ಛರಿಸುತ್ತಿರಲಿ. ಈ ಶುಭ ಸಂದರ್ಭದಂದು ನಾವೆಲ್ಲರೂ ಪ್ರೇಮ ಮತ್ತು ಕೃತಜ್ಞತಾಭರಿತ ಹೃದಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರೋಣ ಹಾಗೂ ಈ ಬಹು ವಿಶೇಷ ಸರೋವರದಲ್ಲಿ ಲೀನವಾಗೋಣ.

ಒಲುಮೆಯಿಂದ,

ಅಜಯ್ ಭಟ್ಟರ್

ಆಹ್ವಾನಪತ್ರಿಕೆ ಮತ್ತು ನೋಂದಣಿ ಬಗ್ಗೆ ವಿವರಗಳು, ಲಖನೌ ಪ್ರಯಾಣ ಇತರೆ ವಿವರಗಳು ಮಿಷನ್ನಿನ ಕೆಳಕಂಡ ವೆಬ್‌ಸೈಟಿನಲ್ಲಿ ಸಿಗುತ್ತವೆ.
http://www.sahajmarg.org/24july2010/index.jsp

ಉತ್ಸವದ ಬಗೆಗಿನ ಸಮಾಚಾರ ಮತ್ತು ಕಾಲಕಾಲಕ್ಕೆ ಹೊಸ ಸುದ್ದಿಗಳನ್ನು ದಯವಿಟ್ಟು ಈ ಪುಟಕ್ಕೆ ಭೇಟಿ ಕೊಟ್ಟು ತಿಳಿದುಕೊಳ್ಳಿ. ಅಭ್ಯಾಸಿಗಳು ಆದಷ್ಟೂ ಮುಂಚಿತವಾಗಿ, ಸಾಧ್ಯವಾದರೆ 15 ಮೇ 2010ಕ್ಕಿಂತ ಮೊದಲೇ ನೋಂದಣಿ ಮಾಡಿಸಬೇಕಾಗಿ ವಿನಂತಿ.

ಯಾವುದೇ ರೀತಿಯ ಸಂದೇಹ ನಿವಾರಣೆಗಾಗಿ ಸಂಪರ್ಕಿಸಿ:
24july.celebration@srcm.org ಅಥವಾ 24july.helpdesk@srcm.org

## ಪ್ರಯಾಣ ಕೋರಿಕೆಯ ವಿವರ ಮತ್ತು ಅರ್ಜಿಫಾರಂಗಳು

ಮಣಪಾಕ್ಕಂ ಅಥವಾ SRCM ನ ಯಾವುದೇ ಆಶ್ರಮಕ್ಕೆ ಭೇಟಿ ನೀಡುವ ಅಭ್ಯಾಸಿಗಳಿಗಾಗಿ ವಿವರಗಳು ಈ ಕೆಳ ಕಂಡಲ್ಲಿ ಲಭ್ಯವಿದೆ.

http://sahajmarg.org/smww/bma-request-to-visit


ಮಣಪಾಕ್ಕಂ ಆಶ್ರಮಕ್ಕೆ ಭೇಟಿ ನೀಡಲು, ಗುರುಗಳೊಂದಿಗೆ ಪ್ರಯಾಣ ಮಾಡಲು ಅಥವಾ ಭಾರತದಲ್ಲಿ ಭಂಡಾರದಲ್ಲಿ ಪಾಲ್ಗೊಳ್ಳಲು ಪ್ರಯಾಣ ಕೋರಿಕೆಯು ಕಡ್ಡಾಯ.

ಅನುಮತಿ ಕೋರುವ ಪ್ರತೀ ವ್ಯಕ್ತಿಯನ್ನು ತಮ್ಮ ಪ್ರಶಿಕ್ಷಕರ ಹಾಗೂ ವಲಯ ನಿರ್ವಹಕರು ಶಿಫಾರಸು ಮಾಡಬೇಕು.

## ಗತಕಾಲಕ್ಕೊಂದು ಇಣುಕುನೋಟ


**ನವೆಂಬರ್ 1950:** (ಬಾಬೂಜಿಯವರ ದಿನಚರಿಯಿಂದ): "ಗುರುಗಳ ಆಣತಿಯಂತೆ ನಡೆಯುವುದು ಪೂಜೆಗಿಂತ ಎಷ್ಟೋ ಮೇಲು. ಲಾಲಾಜಿಮಹಾರಾಜರ ಧ್ಯೇಯದಂತೆ ಯಾರಾದರೂ ಸೇವೆ ಮಾಡಿದರೆ ಅವರೆಡೆಗೆ ನಾನು ಆಕರ್ಷಿತನಾಗುತ್ತೇನೆ."

**1954:** 'ಸತ್ಯೋದಯ' ಪುಸ್ತಕವು 1954ರಲ್ಲಿ ಪ್ರಕಟನೆಗೊಂಡಿತು. ಅದರ ಮುಖಪುಟವು ಚಿತ್ರದಲ್ಲಿದೆ.




**ಈ ಪುಸ್ತಕದಿಂದ ಒಂದು ಉಲ್ಲೇಖ:**
"ಸಾಧ್ಯವಾದಷ್ಟೂ ಅತಿ ಕಡಿಮೆ ಸಮಯದಲ್ಲಿ ಗುರಿ ಮುಟ್ಟುವಂತೆ ಅಸಹನೆ ಅಥವಾ ಸತತ ಚಡಪಡಿಕೆಯೇ ನಮ್ಮ ಪ್ರಗತಿಯ ವೇಗಕ್ಕೆ ಸಹಕರಿಸುವ ಬಹುಮುಖ್ಯ ಅಂಶವಾಗಿದೆ."

"ಆಧ್ಯಾತ್ಮವನ್ನು ಬೆಂಬತ್ತಿರುವ ಮನುಷ್ಯನ ತಯಾರಿಯಲ್ಲಿ ಅಗತ್ಯವಾದವುಗಳಲ್ಲಿ ಮಧ್ಯಮತೆಯೂ ಒಂದು. ಇದೊಂದು ವಿಶಾಲ ಅರ್ಥವುಳ್ಳ ಪದ ಹಗೂ ಮಾನವ ಚಟುವಟಿಕೆಯ ಪ್ರತೀ ಹಂತದಲ್ಲೂ ಕಂಡುಬರುತ್ತದೆ. ಅಂದರೆ ಎಲ್ಲಾ ತರಹದ ಜ್ಞಾನ ಮತ್ತು ಸಾಮರ್ಥ್ಯಗಳಲ್ಲೂ ಸಂತುಲನೆ, ಯಾವುದೇ ವಿಶೇಷ ಉದ್ದೇಶವನ್ನು ಈಡೇರಿಸುವ ಸಮಯದಲ್ಲಿ ಮನದ ಮೇಲೆ ತನ್ನ ಅಲ್ಪ ಮುದ್ರೆಯೂ ಬೀಳದಂತೆ ಸಹಜವಾಗಿ ಅವಶ್ಯವಿರುವಷ್ಟೇ-ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ."



**ಡಿಸೆಂಬರ್ 1957:**
ಪೂಜ್ಯ ಬಾಬೂಜಿಯವರು ಕರ್ನಾಟಕದ ಗುಲ್ಬರ್ಗಾದಲ್ಲಿ ವಾರ್ಷಿಕೋತ್ಸವ ಸಮಾರಂಭದಂದು ನೀಡಿದ 'ಭಗವಂತನ ಸಾಕ್ಷಾತ್ಕಾರಕ್ಕೆ ಅತಿ ಸುಲಭ ಹಾದಿ' ಎಂಬ ಸಂದೇಶದಿಂದ: "ನನ್ನ ವೈಯಕ್ತಿಕ ಅನುಭವದಿಂದ ಎಲ್ಲರೂ ಅತಿ ಸುಲಭವಾಗಿ ಅನುಸರಿಸುವಂತಹ ಸರಳ ಕ್ರಮವನ್ನು ಸೂಚಿಸುತ್ತೇನೆ. ಯಾರಾದರೂ ತನ್ನ ಹೃದಯವನ್ನು ಮಾರಿಕೊಂಡರೆ ಅಂದರೆ ಪೂಜ್ಯ ಗುರುಗಳಿಗೆ ಕೊಡುಗೆ ನೀಡಿದರೆ, ಮತ್ತೇನೂ ಮಾಡಲು ಉಳಿಯಲಾರದು. ಇದರಿಂದ ಅವನು ಅನಂತ ಸತ್ಯದಲ್ಲಿ ಲೀನವಾಗಲು ಸಹಜವಾಗಿಯೇ ಸೆಳೆಯಲ್ಪಡುತ್ತಾನೆ."


"**ಮತ್ತೊಂದು ವಿಷಯ:** ಸುಲಭ ಪದ್ಧತಿಯಲ್ಲಿ ಹೃದಯದ ಸಮರ್ಪಣೆಯನ್ನು ಪರಿಣಾಮಕಾರಿಯಾಗಿಸಲು ಇಚ್ಛೆಯು ಕಾರ್ಯವಷ್ಟೇ ಬೇಕಾದದ್ದು. ಆದರೆ ಇಚ್ಛೆಯು ಲಘುವಾದಷ್ಟೂ, ಸೂಕ್ಷ್ಮವಾದಷ್ಟೂ ಅದರ ಕಾರ್ಯಗಳು ಅಷ್ಟೇ ಪರಿಣಾಮಕಾರಿಯಾಗುತ್ತವೆ."

**ಮೂಲ:** ಸತ್ಯೋದಯ, ರಾಮಚಂದ್ರರ ಸಮಗ್ರ ಕೃತಿಗಳು ಸಂ.3 (ರಾಮಚಂದ್ರರ ಆತ್ಮಕಥೆ ಸಂ2 ರ ಸಂದೇಶಗಳು ಮತ್ತು ಮೆಸೇಜಸ್ ಯೂನಿವರ್ಸಲ್‌ನ ಪುಟಗಳಿಂದ)

ದಯವಿಟ್ಟು ನೀಡಲಾದ ಸೂಚನೆಗಳನ್ನು ಹಾಗೂ ಅರ್ಜಿಗಳ ನಿಯಮಗಳನ್ನು ಲಕ್ಷ್ಯಗೊಟ್ಟು ಪಾಲಿಸಿ. ಸತ್ಖೋಲ್, CREST ಗಳಿಗೆ ಭೇಟಿಯ ಪ್ರಯಾಣ ಕೋರಿಕೆಗಳು ಬೇರೆಯಾಗಿ ನೀಡಬೇಕು ಮತ್ತು ಮಿಷನ್ನಿನ ರಿಟ್ರೀಟ್ ಕೇಂದ್ರಗಳ ಬಗ್ಗೆ ಮಾಹಿತಿಯು ಆಯಾ ಕೇಂದ್ರಗಳ ವೆಬ್‌ಪೇಜುಗಳಿಂದ ದೊರಕುತ್ತದೆ.

ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

# ಪೂಜ್ಯ ಲಾಲಾಜಿಯವರ ಜಯಂತಿ ಸಮಾರಂಭ



ಪೂಜ್ಯ ಲಾಲಾಜಿ ಮಹಾರಾಜರ ಜಯಂತಿ ಉತ್ಸವವನ್ನು ಬಸಂತ ಉತ್ಸವವಾಗಿ ಫೆಬ್ರವರಿ 2ರಂದು ದೇಶದಾದ್ಯಂತ ಕೇಂದ್ರಗಳಲ್ಲಿ ಆಚರಿಸಲಾಯಿತು. ಪ್ರಾಂತಾವಾರು ವರದಿ ಇಂತಿದೆ:

ಆಂಧ್ರ ಪ್ರದೇಶದಲ್ಲಿ ಕೊಲಕಲೂರು ಮತ್ತು ಖಮ್ಮಮ್ ವಲಯಗಳು ಪೂರ್ಣ ದಿನದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು. ಕೊಲಕಲೂರು ಕೇಂದ್ರದಲ್ಲಿ ಉಪನ್ಯಾಸಗಳು, ರಸಪ್ರಶ್ನೆ ಮತ್ತು ವ್ಯಕ್ತಿಯು ಆಮಿಷಗಳಿಗೆ ಹೇಗೆ ಬಲಿಯಾಗುವನು ಮತ್ತು ಗುರುಗಳ ನೆರವಿನಿಂದ ಮತ್ತು ನಿರಂತರ ಸ್ಮರಣೆಯಿಂದ ಅಂತಹ ಪರಿಸ್ಥಿತಿಗಳಿಂದ ಹೊರಬರುವುದು ಹೇಗೆ ಎಂಬ ಚಿತ್ರಿಸುವ ರೂಪಕವನ್ನು ವ್ಯವಸ್ಥೆಗೊಳಿಸಲಾಗಿತ್ತು. ಖಮ್ಮಮ್ ಕೇಂದ್ರದಲ್ಲಿ ಹತ್ತಿರದ ಉಪಕೇಂದ್ರಗಳ ಒಟ್ಟು 164 ಅಭ್ಯಾಸಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

ಅಸ್ಸಾಂನ ಗೌಹಾತಿಯಲ್ಲಿ ಸಮಾರಂಭದಲ್ಲಿ 150 ಅಭ್ಯಾಸಿಗಳು ಪಾಲ್ಗೊಂಡರು. ಹೊರಕೇಂದ್ರದ ಅಭ್ಯಾಸಿಗಳಿಗಾಗಿ ವಲಯ ಆಶ್ರಮದ ನಿವೇಶನಕ್ಕೆ ಭೇಟಿ ನೀಡುವ ವಿಶೇಷ ವ್ಯವಸ್ಥೆ ಮಾಡಲಾಗಿತ್ತು. 'ಶ್ರದ್ಧೆ', 'ಜೀವಂತ ಸದ್ಗುರುವಿನ ಪ್ರಾಮುಖ್ಯತೆ', 'ಸಹಜಮಾರ್ಗ ಮತ್ತು ಭಗವದ್ಗೀತೆ'ಯ ಮೇಲಿನ ಉಪನ್ಯಾಸಗಳನ್ನು ಪ್ರಸರಿಸಲಾಯಿತು; ನಂತರ ಲಾಲಾಜಿ ಮಹಾರಾಜರ ದೃಶ್ಯ ಮಾಧ್ಯಮದ ಪ್ರಸ್ತುತಿ ಮತ್ತು ಹಲವು ಮೌಲ್ಯಾಧಾರಿತ ಚಟುವಟಿಕೆಗಳಿದ್ದವು. ಈ ಸಮಾರಂಭದ ವ್ಯವಸ್ಥೆಯು ಸ್ಥಳೀಯ ಅಭ್ಯಾಸಿಗಳಿಗೆ ಕಲಿಕೆಯ ಅನುಭವವಾಗಿತ್ತು.

ಕೊಲಕಲೂರು



ಗೌಹಾತಿಯಲ್ಲಿ



ಜಾರ್‌ಖಂಡ್‌ನ ಲಾಲ್‌ಪಾನಿಯ ಕೇಂದ್ರದಲ್ಲಿ ಉತ್ಸವವನ್ನು ಬಹು ಉತ್ಸಾಹ ಮತ್ತು ಭಕ್ತಿಯಿಂದ ಆಚರಿಸಲಾಯಿತು. ಬೆಳಗಿನ 7.30ರ ಸತ್ಸಂಗದ ನಂತರ ಸ.ಎನ್.ಕೆ ಸಾಹ್‌ರವರು ಬಾಬೂಜಿಯವರ ಬೋಧನೆಗಳನ್ನು ವಿವರಿಸಿದರು. ಸದ್ಗುರು, ಸಂಸ್ಥೆ ಮತ್ತು ಸಾಧನೆಗಳ ಬಗ್ಗೆ ರಸಪ್ರಶ್ನೆಯನ್ನು ಸಹೋದರಿ ರತ್ನ ಸಾಹ್‌ರವರು ನಡೆಸಿದರು. ಇದು ಬಹು ಆಸಕ್ತಿಯನ್ನು ಉಂಟುಮಾಡಿತು ಹಾಗು ಅಭ್ಯಾಸಿಗಳು ಉತ್ಸಾಹದಿಂದ ಪಾಲ್ಗೊಂಡರು. ಸಮಾವೇಶವು ಅಭ್ಯಾಸಿಗಳಲ್ಲಿ ಭಕ್ತಿಯನ್ನು ಸಮೃದ್ಧಗೊಳಿಸಿತು ಹಾಗು ಇನ್ನೂ ಅಭ್ಯಾಸಿಗಳಾಗಿರದ ಕುಟುಂಬ ಸದಸ್ಯರಲ್ಲಿ ಆಸಕ್ತಿ ಮೂಡಿಸಿತು. ಉತ್ಸವವು ಸಂಜೆಯ ಸತ್ಸಂಗದೊಂದಿಗೆ ಸಂಪನ್ನವಾಯಿತು.

ಕರ್ನಾಟಕದ ಗುಲ್ಬರ್ಗ, ಹುಬ್ಬಳ್ಳಿ ಮತ್ತು ಬೀದರ್ ಕೇಂದ್ರಗಳು ತಮ್ಮ ತಮ್ಮ ಕೇಂದ್ರಗಳಲ್ಲಿ ಸಮಾರಂಭವನ್ನು ಆಚರಿಸಿದವು. ಗುಲ್ಬರ್ಗ ಕೇಂದ್ರದಲ್ಲಿ ಈ ಪ್ರಶಸ್ತ ದಿನದಂದು 14 ಉತ್ಕಾಂಕ್ಷಿಗಳು ಪ್ರಾರಂಭಿಕ ಬೈಠಕ್ ಪಡೆದರು. ಹುಬ್ಬಳ್ಳಿ ಕೇಂದ್ರದಲ್ಲಿ 150 ಮೀರಿ ಅಭ್ಯಾಸಿಗಳು ಪೂರ್ಣ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಬೀದರ್ ಕೇಂದ್ರದಲ್ಲಿ ಸನಿಹದ ಕೇಂದ್ರಗಳ ಅಭ್ಯಾಸಿಗಳು ಭಾಗವಹಿಸಿದರು. ದಿನವು ಕೃಪೆ ಮತ್ತು ಪ್ರೇಮ ಭರಿತವಾಗಿತ್ತು.

ಮಂಗಳೂರಿನಲ್ಲಿ ಸುಮಾರು 50 ಅಭ್ಯಾಸಿಗಳು ಭಾಗವಹಿಸಿದ ಪೂರ್ಣ ದಿನದ ಕಾರ್ಯಕ್ರಮದೊಂದಿಗೆ ಸಮಾರಂಭವೇರ್ಪಟ್ಟಿತ್ತು. ಎರಡು ಸತ್ಸಂಗಗಳೊಂದಿಗೆ 'ಸೇವೆಯ ಮೂಲಕ ಪ್ರೇಮ ಬೆಳೆಸಿಕೊಳ್ಳಿ' ಎಂಬ ಪೂಜ್ಯ ಗುರುಗಳ ಉಪನ್ಯಾಸವನ್ನು ಓದಲಾಯಿತು. ಉಪಾಹಾರದ ನಂತರ ಉಪನ್ಯಾಸಗಳು ಮತ್ತು ಅಭ್ಯಾಸಿಗಳು ಹಾಡಿದ ಗೀತೆಗಳಿದ್ದವು– ಮಧ್ಯಾಹ್ನ ಸದ್ಗುರುಗಳ "ಪ್ರೇಮ ಸಾಗರ" ಎಂಬ ಉಪನ್ಯಾಸವನ್ನು ಬಿತ್ತರಿಸಲಾಯಿತು.

ಪರಂಧಾಮವನ್ನು ನವೆಂಬರ್ 2008ರಲ್ಲಿ ಉದ್ಘಾಟಿಸಿದ ನಂತರ ಪ್ರಥಮ ಬಾರಿಗೆ ಪೂಜ್ಯ ಲಾಲಾಜಿಯವರ ಜನ್ಮದಿನ ಸಮಾರಂಭವನ್ನು ಆಚರಿಸಲು ಬೆಂಗಳೂರಿನ ಎಲ್ಲೆಡೆಯಿಂದ ಇಲ್ಲಿ ಸೇರಿದ್ದರು. ಸುಮಾರು 1300 ಅಭ್ಯಾಸಿಗಳು ಮತ್ತು 100 ಮಕ್ಕಳು ನೆರೆದಿದ್ದರು. ಲಾಲಾಜಿಯವರ ಜೀವನ ಮತ್ತು ಬೋಧನೆಗಳ ಬಗ್ಗೆ ಅನೇಕ ಉಪನ್ಯಾಸಗಳಿದ್ದವು. 'ಲಾಲಾಜಿಯವರ ಜೀವನ', ಚಲನಚಿತ್ರವನ್ನು ಎಲ್ಲ ಅಭ್ಯಾಸಿಗಳೂ ವೀಕ್ಷಿಸಲು ಅನುವು ಮಾಡಲು ಅನೇಕ ದೂರದರ್ಶಕಗಳ ವ್ಯವಸ್ಥೆ ಮಾಡಲಾಗಿತ್ತು. ಸಂಜೆಯ ಸತ್ಸಂಗದೊಂದಿಗೆ ಸಮಾರಂಭವು ಸಂಪನ್ನಗೊಂಡಿತು.

Hubli



Mangalore



Bangalore



ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

ಜನವರಿ 2010

ಸಂಪುಟ 3 ಸಂಚಿಕೆ 1


ಅಲುವ


ಮಿರ್ಜಾಪುರ


ಕೊಲ್ಕೊತ್ತ

ಕೇರಳದಲ್ಲಿ ಬಸಂತ ಉತ್ಸವವನ್ನು ಅಲುವ, ಎರ್ನಾಕುಲಂ, ಪಾಲಕ್ಕಾಡ್, ಪಟ್ಟಂಬಿ ಮತ್ತು ಕಾಸರಗೋಡು ಕೇಂದ್ರಗಳು ಪೂರ್ಣ ದಿನದ ಕಾರ್ಯಕ್ರಮಗಳೊಂದಿಗೆ ಆಚರಿಸಿದವು. ಬೆಳಗಿನ 7.30ರ ಸತ್ಸಂಗದೊಂದಿಗೆ ಪ್ರಾರಂಭವಾಗಿ ಉಪಾಹಾರದ ನಂತರ ಲಾಲಾಜಿಯವರ ಜೀವನದ ಚಲನಚಿತ್ರವನ್ನು ಪ್ರದರ್ಶಿಸಲಾಯಿತು. ಭಜನೆಗಳ ಹಾಡುವಿಕೆ, ಮಿಷನ್ನಿನ ಸಾಹಿತ್ಯವನ್ನು ಓದುವುದು ಸೇರಿದ್ದವು. ಪಾಲಕ್ಕಾಡು ಕೇಂದ್ರದಲ್ಲಿ ಪತಿರಿಪಾಲ, ನೆಮ್ಮರ್, ರೊಂಗಾಡ್ ಮತ್ತು ಒಟ್ಟಪಳಂ ಕೇಂದ್ರದಿಂದಲೂ ಸೇರಿದ್ದರು.

ಕಾಸರಗೋಡು ಕೇಂದ್ರವು ಸ್ವಮೌಲ್ಯಮಾಪನ ಪ್ರಶ್ನಾವಳಿಯನ್ನು ಹಮ್ಮಿಕೊಂಡಿತ್ತು; ವಿಷಯಗಳು ಹೀಗಿದ್ದವು: ಸಮಾಜದೊಂದಿಗೆ ಅಭ್ಯಾಸಿಯ ಪರಸ್ಪರ ಪ್ರತಿಕ್ರಿಯೆ, ಉದ್ಯೋಗ, ಕುಟುಂಬ, ದೈಹಿಕ, ಮಾನಸಿಕ ಸ್ಥಿತಿಗಳ ಪಾಲನೆ ಮತ್ತು ಆಧ್ಯಾತ್ಮಿಕತೆ, ಲಾಲಾಜಿಯವರು ನೈತಿಕತೆಗೆ ನೀಡಿದ ಪ್ರಾಮುಖ್ಯತೆಯನ್ನು ಆಧರಿಸಿ ಆ ಪ್ರಶ್ನಾವಳಿಯನ್ನು ಸಿದ್ಧಪಡಿಸಲಾಗಿತ್ತು. ಸಮಾರಂಭದ ವೇಳೆ ಅಭ್ಯಾಸಿಗಳು ಪರಮಾನಂದ ಮತ್ತು ಕೃತಜ್ಞತೆಯುಳ್ಳ ಪರಿಸರವನ್ನು ಅನುಭವಿಸಿದರು.

ಉತ್ತರ ಪ್ರದೇಶದ ಮಿರ್ಜಾಪುರ ಕೇಂದ್ರದಲ್ಲಿ ಬಸಂತ ಉತ್ಸವವನ್ನು ಚೈತನ್ಯ ಮತ್ತು ಉತ್ಸಾಹಗಳಿಂದ ಆಚರಿಸಲಾಯಿತು. ಬೆಳಗಿನ ಸತ್ಸಂಗದ ನಂತರ ವಿವಿಧ ವಿಷಯಗಳ ಉಪನ್ಯಾಸಗಳಿದ್ದವು. ಭಕ್ತಿ ಸಂಗೀತವಿದ್ದಿತು ಹಾಗು ಲಾಲಾಜಿ ಮಹಾರಾಜರ ಉಕ್ತಿಗಳನ್ನು ವಾಚನ ಮಾಡಲಾಯಿತು.

ಪಶ್ಚಿಮ ಬಂಗಾಲದ ಕೊಲ್ಕೊತ್ತ, ಗಾಂಗ್‌ಟೋಕ್, ರಾಣಿಗಂಜ್ ಮತ್ತು ಸಿಲಿಗುರಿಯಂತಹ ಕೇಂದ್ರಗಳಲ್ಲಿ ಅಮಿತೋತ್ಸಾಹ, ಹರ್ಷ ಮತ್ತು ಆಂತರಿಕ ಸಂತಸದೊಂದಿಗೆ ಆಚರಿಸಲಾಯಿತು. ರಾಣಿಗಂಜ್ ಕೇಂದ್ರವು ಸತ್ಸಂಗದ ನಂತರ ಪ್ರಶ್ನೋತ್ತರ ಸಮಾವೇಶವನ್ನು ಹಮ್ಮಿಕೊಂಡಿದ್ದಿತು. ಕೊಲ್ಕತ್ತದ ಅಭ್ಯಾಸಿಗಳು 'ದಿವ್ಯಲೋಕದಿಂದ ಪಿಸುಮಾತುಗಳು' ಮತ್ತು ದೈನಿಕ ಸೂಕ್ತಿಗಳನ್ನು ವಾಚಿಸಿ ಅವುಗಳ ಅರ್ಥಗಳ ಬಗ್ಗೆ ಧ್ಯಾನಿಸಿದರು. ಸಂಜೆಯ ಸತ್ಸಂಗದೊಂದಿಗೆ ಸಮಾರಂಭದ ಸಮಾರೋಪಕ್ಕೆ ಮುನ್ನ ಲಾಲಾಜಿಯವರ ಜೀವನದ ಚಲನಚಿತ್ರ ಪ್ರದರ್ಶನವಿದ್ದಿತು.

## ಸ್ತ್ರೀಯರ ಅಧ್ಯಯನ ತಂಡ, ಕೊಲ್ಕತ

ತಮ್ಮ ಪ್ರಾಯೋಗಿಕ ಜೀವನದಲ್ಲಿ ಸಹಜಮಾರ್ಗದ ವಿವಿಧ ಅಂಶಗಳ ಅಳವಡಿಕೆಯ ಬಗ್ಗೆ ಚರ್ಚಿಸಲು ಕೊಲ್ಕತ ಆಶ್ರಮದ ಯುವತಿಯರು ಆರಂಭಿಸಿದ್ದಾರೆ. ಪ್ರತಿ ವಾರವೂ ಒಂದು ವಿಷಯವನ್ನು ಆಯ್ಕೆ ಮಾಡಿ ಅದರ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಅಂತಹ ಒಂದು ಸಭೆಯಲ್ಲಿ ಹತ್ತು ನಿಯಮಗಳಲ್ಲಿ ಒಂದಾದ 'ಎಲ್ಲರನ್ನೂ ನಿಮ್ಮ ಸೋದರರೆಂದು ತಿಳಿದು ಹಾಗೆಯೇ ವರ್ತಿಸಿರಿ' ಎಂಬ ನಿಯಮವನ್ನು ಚರ್ಚಿಸಲಾಯಿತು. ನಾವು ಕೌಟುಂಬಿಕ ಜೀವನದಲ್ಲಿ ಎದುರಿಸುವ, 'ಬೆಳೆದ ಮಕ್ಕಳೊಂದಿಗೆ ವ್ಯವಹರಿಸಬೇಕಾದ ರೀತಿ, ನಮ್ಮ ಮೌಲ್ಯಗಳು ಮತ್ತು ಬೆಳೆಯುತ್ತಿರುವ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವಗಳ ನಡುವೆ ಸಮತೋಲನ. ಇಂತಹ ವಿಷಯಗಳಿಗೆ ಪರಿಹಾರ ಹುಡುಕಲಾಗುತ್ತದೆ. ಪರಸ್ಪರ ಪ್ರತಿಕ್ರಿಯೆಗಳಲ್ಲಿ ವ್ಯಕ್ತವಾದುದೆಂದರೆ, ನಮ್ಮ ಮಕ್ಕಳು ತಮ್ಮ ಒಳಿತಿಗಾಗಿಯೆ ನಿಯಮಪಾಲಿಸಬೇಕಾದಂತೆಯೇ ನಾವುಗಳು ನಮ್ಮ ಪ್ರಗತಿಗಾಗಿ ಸದ್ಗುರುಗಳ ಮಕ್ಕಳಾದ ನಾವು, ಅವರು ಹೇಳಿದುದನ್ನು ಪಾಲಿಸತಕ್ಕದ್ದು. ನಮ್ಮ ದಿನಚರಿ ಬರೆಯುವುದು, ಅಹಂಭಾವದ ನಿರ್ವಹಣೆ, ವಿಶ್ವ ಪ್ರಾರ್ಥನೆ, ಮತ್ತು ನಿರಂತರ ಸ್ಮರಣೆಯಂತಹ ವಿಷಯಗಳನ್ನೂ ಸಹ ಅನೇಕ ಸಮಾವೇಶಗಳಲ್ಲಿ ಚರ್ಚಿಸಲಾಯಿತು. ಪ್ರತಿಯೊಬ್ಬರೂ ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು, ಸಮಸ್ಯೆಗಳು, ಯುಕ್ತ ಪರಿಹಾರಗಳನ್ನೂ ಹಂಚಿಕೊಳ್ಳಲು ಅವಕಾಶವಿರುತ್ತದೆ. ನಿಜಜೀವನದ ಸ್ಥಿತಿಗತಿಗಳ, ವೈಚಾರಿಕತೆಯಿಂದಾಗಿ ಈ ಸ್ತ್ರೀಯರು ಸಹಜಮಾರ್ಗದ ವಿವಿಧ ಆಯಾಮಗಳನ್ನು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ತಮ್ಮ ಚಿಂತನೆಗಳ ವಿನಿಮಯವು ಸಹಜಮಾರ್ಗದ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನದಲ್ಲಿ ತಮಗೆ ಹೆಚ್ಚು ಆತ್ಮವಿಶ್ವಾಸ, ಸ್ಪಷ್ಟತೆ ಮತ್ತು ಹೊಸ ದ್ವಾರಗಳ ತೆರೆಯುವಿಕೆಯನ್ನು ನೀಡುವುದೆಂದು ಸದಸ್ಯರ ಅಭಿಪ್ರಾಯಗಳಿಂದ ವ್ಯಕ್ತವಾಗಿದೆ.

## ಲಾಲ್‌ಪಾನಿಯದ ವಿಹಾರ

ಜಾರ್‌ಖಂಡದ ರಾಂಚಿ ಮತ್ತು ಲಾಲ್‌ಪಾನಿಯದ ಕೇಂದ್ರಗಳ ಅಭ್ಯಾಸಿಗಳು ಸಹಜಮಾರ್ಗದ ಬಗೆಗಿನ ಚರ್ಚೆ ಮತ್ತು ವಿಹಾರಗಳನ್ನು ಒಟ್ಟಾಗಿ ಪಡೆಯುವ ಮಾರ್ಗವನ್ನು ಸಮಾಲೋಚಿಸಿದರು. ಲಾಲ್‌ಪಾನಿಯವು ಅತಿಥೇಯವಾಗಿ ರಾಂಚಿಯ ಸಹೋದರ ರಾಮ್‌ಅವತಾರ ಸಾಹುರವರು ಕಾರ್ಯಕ್ರಮ ಆಯೋಜಿಸಿದರು. ಡಿಸೆಂಬರ್ 26ರಂದು 20 ಅಭ್ಯಾಸಿಗಳು ಲಾಲ್‌ಪಾನಿಯಕ್ಕೆ ಆಗಮಿಸಿದಾಗ ಲಾಲ್‌ಪಾನಿಯ ಅಭ್ಯಾಸಿಗಳ ಪಿತೃ ಸಮಾನ ಪ್ರೇಮದ ಮತ್ತು ಟಿಟಿಪಿಎಸ್ ಅತಿಥಿ ಗೃಹದ ಹುಲ್ಲು ಹಾಸಿನಲ್ಲಿ ಭವ್ಯ ಸೂರ್ಯ ಪ್ರಕಾಶದ ಸ್ವಾಗತ ಪಡೆದರು. ರಾಂಚಿ ಕೇಂದ್ರದ ಅಭ್ಯಾಸಿಗಳಿಗೆ ಸುಂದರವಾದ ಸ್ವಾಭಾವಿಕ ಜಲಪಾತವು ಬಹು ಆಹ್ಲಾದಕರವಾಗಿತ್ತು. ಅಷ್ಟೆ ಚೇತೋಹಾರಿಯಾಗಿದ್ದುದೆಂದರೆ ಸಹಜಮಾರ್ಗದ ವಿವಿಧ ಅಂಶಗಳ ಮೇಲಣ ಚರ್ಚೆ. ಲಾಲ್‌ಪಾನಿಯದ ಮೂವರು ಸದಸ್ಯರು ಮತ್ತು ರಾಂಚಿಯ ಒಬ್ಬರು ಕೂಡಲೇ ಆರಂಭಿಕ ಬೈಠಕ್ ಪಡೆದುದು ಇದರ ಪರಿಣಾಮವನ್ನು ತೋರಿತು. ಆಹಾರ, ಸತ್ಕಾರ ಮತ್ತು ಪ್ರೇಮವು ಪ್ರತಿಯೊಬ್ಬರ ಮೇಲೂ ಗುರುಗಳ ಮೌನಕಾರ್ಯ ಮತ್ತು ಅಂತಹ ಕಾರ್ಯಕ್ರಮ ಯೋಜನೆಗೆ ಉತ್ಸಾಹವನ್ನು ಮನಗಾಣಿಸುತ್ತದೆ.



ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

## ಆರಂಭಿಕ ಅಭ್ಯಾಸಿ ತರಬೇತಿ ಕಾರ್ಯಕ್ರಮ

ಅಭ್ಯಾಸಿಗಳಿಗಾಗಿ ಸಮಾಸಂತಸಂ ಒದಗಿಸಿರುವ ದೃಶ್ಯ-ಶ್ರವಣ ತರಬೇತಿ ವ್ಯವಸ್ಥೆಯು ಸಹಜಮಾರ್ಗ ಧ್ಯಾನ ಪದ್ಧತಿಯ ಸ್ಪಷ್ಟನೆಯನ್ನು ನೀಡುತ್ತದೆ. ಗುರುಗಳ ಉಪನ್ಯಾಸಗಳ ಶ್ರವಣ ಮತ್ತು ದೃಶ್ಯ ಮಾಧ್ಯಮದ ತುಣುಕುಗಳು ಅಭ್ಯಾಸಿಗಳ ಆಪತ್ತಿಯನ್ನು ಆಕರ್ಷಿಸುತ್ತವೆ. ಕಾರ್ಯಕ್ರಮವನ್ನು ಸಮಾಸಂತಸಂ ರವರಿಂದ ತರಬೇತಿ ಪಡೆದ ಸಂಯೋಜಕರಿಂದ ಕಾರ್ಯಕ್ರಮವನ್ನು ನಡೆಸಲಾಗುತ್ತದೆ; ಅಗತ್ಯವಾದ ಯೋಜನೆ ಮತ್ತು ಪರಿಶ್ರಮಗಳನ್ನು ಅದು ಸುಲಭಗೊಳಿಸುತ್ತದೆ, ಆದ್ದರಿಂದ ಆಗಾಗ್ಗೆ ಮತ್ತು 'ವಿವಿಧ ಕೇಂದ್ರಗಳಲ್ಲಿ ಸುಲಭವಾಗಿ ನಡೆಸಬಹುದಾಗಿದೆ.

ಕಾರ್ಯಕ್ರಮವನ್ನು ಈ ಕೆಳಕಂಡ ಕೇಂದ್ರಗಳಲ್ಲಿ ನಡೆಸಲಾಗಿ, ಅಭ್ಯರ್ಥಿಗಳು ಕಾರ್ಯಕ್ರಮದ ವಸ್ತು ವಿಷಯಗಳನ್ನು ಶ್ಲಾಘಿಸಿದ್ದಾರೆ ಹಾಗು ತಮ್ಮ ನಿಯತ ಸಾಧನೆಯನ್ನು ಪ್ರಚೋದಿಸಿ ಉತ್ಸಾಹವನ್ನುಂಟು ಮಾಡುವ ಸಲುವಾಗಿ ಹೆಚ್ಚು ಹೆಚ್ಚಾಗಿ ಈ ಕಾರ್ಯಕ್ರಮ ನಡೆಸಬೇಕಾದ ಅಗತ್ಯವನ್ನು ವ್ಯಕ್ತಪಡಿಸಿದ್ದಾರೆ.

ರಾಯಚೂರು: ಫೆಬ್ರವರಿ 7ರಂದು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು 32 ಅಭ್ಯಾಸಿಗಳಿದ್ದರು.

ನೆಲ್ಲೂರು, ಆಂಧ್ರಪ್ರದೇಶ: ಜನವರಿ 16ರಂದು ನಡೆಸಿದ ಕಾರ್ಯಕ್ರಮದಲ್ಲಿ ಸುಮಾರು 28 ಅಭ್ಯಾಸಿಗಳು ಭಾಗವಹಿಸಿದ್ದರು; ಅವರಲ್ಲಿ ಬಹುತೇಕ ಯುವಕರಿದ್ದರು. ಅವರಲ್ಲಿ ಅನೇಕ ಪ್ರಶ್ನೆಗಳಿದ್ದು ದಿನದ ಕೊನೆಯಲ್ಲಿ ಅವರ ಪ್ರಶ್ನೆಗಳಿಗೆಲ್ಲ ಪರಿಹಾರ ದೊರಕಿ ತೃಪ್ತಿ ವ್ಯಕ್ತಪಡಿಸಿದರು.

ಚಿತ್ತೂರು, ಆಂಧ್ರಪ್ರದೇಶ: ಜನವರಿ 3ರಂದು ವ್ಯವಸ್ಥೆ ಮಾಡಿದ ಕಾರ್ಯಕ್ರಮದಲ್ಲಿ 32 ಹೊಸ ಅಭ್ಯಾಸಿಗಳಿದ್ದರು.

ಥೇಣಿ, ತಮಿಳುನಾಡು: ಫೆಬ್ರವರಿ 7ರಂದು ಇಂತಹ ಕಾರ್ಯಕ್ರಮವು ಪ್ರಥಮ ಬಾರಿಗೆ ಈ ಕೇಂದ್ರದಲ್ಲಿ ನಡೆಯಿತು. ಎರಡು ವರ್ಷಗಳಿಂದೀಚೆಗೆ ಹೊಸದಾಗಿ ಸೇರಿದ 32 ಅಭ್ಯಾಸಿಗಳು ಬಹು ಉತ್ಸಾಹದಿಂದ ಭಾಗವಹಿಸಿದ್ದರು.

ಕೊಯಮತ್ತೂರಿನ ಬಳಿಯ ಅನ್ನೂರು: ಫೆಬ್ರವರಿ 14ರಂದು ಕಾರ್ಯಕ್ರಮವನ್ನು ಕೊಯಮತ್ತೂರಿನ ಸ.ನಳಿನಿ ಕುಮಾರ್‌ರವರು ನಡೆಸಿದರು. 20ಕ್ಕೂ ಮೀರಿ ಅಭ್ಯಾಸಿಗಳಿದ್ದರು. ಕೆಲವೇ ತಿಂಗಳುಗಳ ಹಿಂದೆ ಆರಂಭವಾದ ಈ ಕೇಂದ್ರವು ಈ ಕಾರ್ಯಕ್ರಮದಿಂದಾಗಿ ಹುರುಪು ಪಡೆಯಿತು.


ಚಿತ್ತೂರು


ಅನ್ನೂರು


ರಾಯಚೂರು

## ಪ್ರಬಂಧ ರಚನಾ ಸ್ಪರ್ಧೆ- ಪ್ರಮಾಣಪತ್ರ ವಿತರಣೆ

ವಿಶ್ವ ಸಂಸ್ಥೆಯ ಅಂತರರಾಷ್ಟ್ರೀಯ ಯುವಜನತೆಯ ದಿನಾಚರಣೆ(ಆಗಸ್ಟ್ 12, 2009 )ಯ ಸಂದರ್ಭದಲ್ಲಿ ನಡೆಸಲಾದ ಅಖಿಲ ಭಾರತ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಪ್ರಮಾಣಪತ್ರ ವಿತರಣೆಗಾಗಿ ಫೆಬ್ರವರಿ 7ರಂದು ವಿಶಾಖಪಟ್ಟಣದ ಆಶ್ರಮದಲ್ಲಿ ಬಹುಮಾನ ವಿತರಣಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸುಮಾರು 800 ವಿದ್ಯಾರ್ಥಿಗಳು ತಮ್ಮ ತಂದೆತಾಯಿಯರೊಂದಿಗೆ ಹಾಜರಿದ್ದರು. ಅತ್ಯುತ್ತಮ ನಿರ್ವಹಣೆಗಾಗಿ ಬಹುಮಾನ ಷೀಲ್ಡನ್ನು ಆಂಧ್ರ ಮೆಡಿಕಲ್ ಕಾಲೇಜಿಗೆ ನೀಡಲಾಯಿತು. ಯುವಜನತೆಯ ಮನದಲ್ಲಿ ಪ್ರೇಮ, ಐಕಮತ್ಯ ಮತ್ತು ಭ್ರಾತೃತ್ವಗಳ ಮಾನವೀಯ ಮೌಲ್ಯಗಳನ್ನು ಪ್ರಚೋದಿಸುವ ನಿಟ್ಟಿನಲ್ಲಿ ನಮ್ಮ ಮಿಷನ್ನಿನ ಪ್ರಯತ್ನಗಳನ್ನು ಅನೇಕರು ಶ್ಲಾಘಿಸಿದರು.

ಹೈದರಾಬಾದು ಕೇಂದ್ರದಲ್ಲಿ ಫೆಬ್ರವರಿ 7ರಂದು ವಲಯ1ಎ (ಆ.ಪ್ರ-ಉತ್ತರ)ನಲ್ಲಿನ ವಿಜೇತರಿಗೆ ಸಮಾರಂಭವಿದ್ದಿತು. ವಲಯ ಆಶ್ರಮಕ್ಕೆ ವಿದ್ಯಾರ್ಥಿಗಳಿಗೆ ತಮ್ಮ ಮಾತಾಪಿತೃಗಳೊಂದಿಗೆ ಬರಲು ಆಹ್ವಾನಿಸಲಾಗಿತ್ತು. ಪ್ರತಿಯೊಬ್ಬ ವಿಜೇತರಿಗೂ ಪ್ರಮಾಣಪತ್ರಗಳೊಂದಿಗೆ 'ನನ್ನ ಗುರುದೇವ' ಪುಸ್ತಕದ ಚಿತ್ರಗಳನ್ನೊಳಗೊಂಡ ಆವೃತ್ತಿಯ ಪ್ರತಿಗಳನ್ನು ನೀಡಲಾಯಿತು. ಬಹುಮಾನ ವಿತರಣೆಯ ನಂತರ ಪರಸ್ಪರ ಸಂವಾದದ ಸಮಾವೇಶದಲ್ಲಿ ನಮ್ಮ ಸಂಸ್ಥೆ ಮತ್ತು ಮಾನವತೆ ಆದರ ಕೊಡುಗೆಯ ಒಂದು ಕಿರು ಚಿತ್ರಣ ನೀಡಲಾಯಿತು. ಪ್ರಬಂಧಗಳಿಗೆ ನೀಡಲಾದ ವಿಷಯಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಶ್ರೋತೃಗಳನ್ನು ವಿನಂತಿಸಲಾಯಿತು. ತರುಣರು ತಮ್ಮ ಸ್ವಂತ ಅಭಿಪ್ರಾಯಗಳ ಆಧಾರದೊಂದಿಗೆ ಮಾತನಾಡುವುದು ಹರ್ಷದಾಯಕವಾಗಿತ್ತು. ಪ್ರತಿಯೊಬ್ಬರೂ ಈ ಜಗತ್ತನ್ನು ಪ್ರೇಮ ಮಾತ್ರವೇ ಉತ್ತಮಗೊಳಿಸಬಲ್ಲದು ಎಂಬ ಆಶಯವನ್ನು ವ್ಯಕ್ತ ಪಡಿಸಿದರು. ಹಲವು ಮಾತಾಪಿತೃಗಳು ಮತ್ತು ಬೋಧಕರು ನಮ್ಮಂತಹ ಸಂಸ್ಥೆಗಳವರು ಸದ್ದಿಲ್ಲದೆ ಮಾನವತೆಯ ಉದ್ಧಾರಕ್ಕಾಗಿ ನೀಡುತ್ತಿರುವ ಕಾಣಿಕೆಯನ್ನು ಶ್ಲಾಘಿಸಿದರು.

ಫೆಬ್ರವರಿ 2ರಂದು ವಿರುಧುನಗರ ಆಶ್ರಮ, ಚಿನ್ನವಳ್ಳಿಕುಂನಲ್ಲಿ ಶ್ರೀ ರಾಮಚಂದ್ರ ಮಿಷನ್ನಿನ ಜಂಟಿಕಾರ್ಯದರ್ಶಿಗಳಾದ ಸ. ಎ.ಪಿ. ದುರೈರವರು ಒಟ್ಟು 43 ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು.

ಸೂರತ್‌ನಲ್ಲಿ ವಲಯ ವಿಜೇತರು, ಅವರು ತಂದೆತಾಯಿಯರು ಬೋಧಕರು ಮತ್ತು ಪ್ರಾಂಶುಪಾಲರಿಗೆ ಮನ್ನಣಾ ಪತ್ರಗಳನ್ನು ನೀಡಲಾಯಿತು. ಸುಮಾರು 45 ಅತಿಥಿಗಳನ್ನು ಆಹ್ವಾನಿಸಿ ಗುಜರಾತಿನ ವಲಯ ಸಂಚಾಲಕ ಸ.ವಿನಯ್ ಚಾವ್ಡಾರವರು ಪ್ರಬಂಧ ಸ್ಪರ್ಧೆಯ ವಿವರಣೆಗಳನ್ನು ನೀಡಿದರು. ಡಾ. ಸುರೇಂದ್ರ ಅಗರವಾಲ(ಸೂರತ್ ವಲಯ ಸಂಚಾಲಕರು)ರವರು ಶ್ರೀ ರಾಮಚಂದ್ರ ಮಿಷನ್ನಿನ ಚಟುವಟಿಕೆಗಳನ್ನು ಪ್ರಸ್ತುತಪಡಿಸಿ ಸಹಜಮಾರ್ಗದಲ್ಲಿ ಅನುಸರಿಸುವ ಧ್ಯಾನ ಪದ್ಧತಿಯ ಬಗ್ಗೆ ಒತ್ತು ನೀಡಿದರು.



Hanur



Dharwad



Gandhigram



## ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣ (ವತಾಆಶಿ) ಕಾರ್ಯಕ್ರಮಗಳು

### ಗಾಂಧಿಗ್ರಾಮ, ತಮಿಳುನಾಡು

ಗಾಂಧಿಗ್ರಾಮ ಗ್ರಾಮೀಣ ವಿಶ್ವ ವಿದ್ಯಾಲಯ ಮತ್ತು ಗಾಂಧಿಗ್ರಾಮ ಟ್ರಸ್ಟ್ ವತಿಯಿಂದ ಗಾಂಧಿಗ್ರಾಮದ ಲಕ್ಷ್ಮಿ ಕಾಲೇಜ್ ಆಫ್ ಎಜುಕೇಷನ್‌ನ ಅಭ್ಯರ್ಥಿಗಳು ಮತ್ತು ಬೋಧಕ ವರ್ಗಕ್ಕಾಗಿ ಎರಡು ದಿನದ ವತಾಆಶಿ ಕಾರ್ಯಕ್ರಮವನ್ನು ಜನವರಿ 8 ಮತ್ತು 9ರಂದು ಏರ್ಪಡಿಸಲಾಯಿತು, ಸುಮಾರು 250 ಮಂದಿ ಉಪಸ್ಥಿತರಿದ್ದರು. ಮೊದಲ ದಿನ ಸಹೋದರಿ ಸೀತರವರು ಮನೋ ನಿಯಂತ್ರಣ, ಮೌಲ್ಯಗಳು, ಚಾರಿತ್ರ್ಯ ನಿರ್ಮಾಣ ಮತ್ತು ಸಮತೋಲನ ಅಸ್ತಿತ್ವದ ಬಗ್ಗೆ ಮಾತನಾಡಿದರು. ಎರಡನೆಯ ದಿನ ಯೋಗ ಮತ್ತು ಸಹಜಮಾರ್ಗದ ಬಗ್ಗೆ ದೃಶ್ಯ ಮಾಧ್ಯಮದೊಂದಿಗೆ ಪ್ರಸ್ತುತಿಯಿದ್ದಿತು. ಯೋಗ ಮತ್ತು ಆಧ್ಯಾತ್ಮಿಕತೆಯ ಬಗ್ಗೆ ಉಪನ್ಯಾಸಗಳಿದ್ದವು. ಕಾರ್ಯಕ್ರಮ ಪ್ರಮುಖ ಅಂಶವೆಂದರೆ ಗಾಂಧಿಗ್ರಾಮ ಟ್ರಸ್ಟ್‌ನ ಅನಾಥಾಲಯದ ಮಕ್ಕಳೊಂದಿಗೆ ಸಂವಾದವಾಗಿತ್ತು. ಸ್ವಯಂ ಸೇವಕರು ಲಕ್ಷ್ಮಿ ಸೇವಾ ಸಂಘಟನ ಸಿದ್ಧ ಔಷಧಿ ತಯಾರಿಕಾ ಘಟಕಕ್ಕೆ ಭೇಟಿನೀಡಿ ಕೆಲಸಗಾರರನ್ನು ಉದ್ದೇಶಿಸಿ ಮಾತನಾಡಿದರು.

### ಧಾರವಾಡ, ಕರ್ನಾಟಕ

ಧಾರವಾಡದ ವಿದ್ಯಾವರ್ಧಕ ಸಭಾಂಗಣದಲ್ಲಿ ಜನವರಿ 9 ರಂದು ಮೌ ಆ ಶಿ ಕಾರ್ಯಕ್ರಮವನ್ನು ನಿಯೋಜಿಸಲಾಯಿತು. ಬಾಲ ಬಳಗ, ಜೆಎಸ್‌ಎಸ್ ಶಾಲೆ ಮತ್ತು ಇತರ ಶಾಲೆಗಳ 40 ಮೀರಿದ ಶಿಕ್ಷಕರು ಪಾಲ್ಗೊಂಡರು. ಬೆಳಗಿನ ಸಮಾವೇಶವನ್ನು ಸೋ. ಆಶ ಮತ್ತು ಸೋ. ಸರೋಜರವರು ನಡೆಸಿದರು; ಮೌಲ್ಯಗಳ ಪ್ರಾಮುಖ್ಯತೆ ಮತ್ತು ಮಕ್ಕಳಿಗೆ ಮೌಲ್ಯಗಳನ್ನು ಬೋಧಿಸುವುದು ಇಂತಹ ವಿಷಯಗಳಿದ್ದವು. ಮಧ್ಯಾಹ್ನ ಸ. ಅಜಿತ್ ಕಾಮತ್‌ರವರು ಮನೋ ನಿಯಂತ್ರಣ ಮತ್ತು ಧ್ಯಾನದ ಬಗ್ಗೆ ಮಾತನಾಡಿದರು. ಸಂಜೆ 5 ರಿಂದ 7ರ ವರೆಗೆ ಸಹೋದರಿ ವರಲಕ್ಷ್ಮಿಯವರು ತಂದೆತಾಯಂದಿರಿಗೆ ಸಮಾವೇಶ ನಡೆಸಿದರು. ಶ್ರೀ ಶಂಕರ ಹಲಗಟ್ಟಿ, ಅಧ್ಯಕ್ಷರು, ಬಾಲವಿಕಾಸ ಅಕಾಡೆಮಿ ಇವರು ಕಾರ್ಯಕ್ರಮವನ್ನು ಶ್ಲಾಘಿಸಿದರು.

**ಕೋಲ್ಕತ** ಕೇಂದ್ರವು ಜನವರಿ 10ರಂದು ಮೌಆಶಿ ಸ್ವಯಂ ಸೇವಕರಿಗಾಗಿ ಒಂದು ತರಬೇತಿ ಶಿಬಿರ ಏರ್ಪಡಿಸಿತ್ತು. ಕಾರ್ಯಕ್ರಮದ ಉದ್ದೇಶವು ಮೌಆಶಿ ಪರಿಕಲ್ಪನೆ ಮತ್ತು ಅದನ್ನು ಕಾರ್ಯಗತ ಮಾಡುವ ಬಗೆ ಹೇಗೆ ಎಂಬುದನ್ನು ಪರಿಚಯಿಸುವುದಾಗಿದ್ದಿತು. ಮೌಆಶಿ ಒತ್ತಿ ಹೇಳುವುದೆಂದರೆ ಓರ್ವನಿಗೆ ಏನನ್ನೂ ಕಲಿಸಲಾಗುವುದಿಲ್ಲ. ಶಿಕ್ಷಣವು ಆಂತರ್ಯದಿಂದಲೇ ಅನಾವರಣವಾಗುವಂತಹುದಾಗಿದ್ದು ವಿದ್ಯಾರ್ಥಿಯಲ್ಲಿ ಅತ್ಯುತ್ತಮವಾದುದನ್ನು ಬೆಳಕಿಗೆ ತರುತ್ತದೆ. ಮಕ್ಕಳಿಗೆ ನೀಡಲಾದ ಆಧ್ಯಾತ್ಮಿಕ ಮೌಲ್ಯಗಳ ಪ್ರಾಯೋಗಿಕ ಶಿಕ್ಷಣವು ಯುವ ಜನತೆಯನ್ನು ಸವಾಲುಗಳನ್ನು ಎದುರಿಸಲು ಶಕ್ತರನ್ನಾಗಿಸುತ್ತದೆ. ಮೌಆಶಿ ಯನ್ನು ನಡೆಸುವ ವಿಧಾನವನ್ನು ತೋರ್ಪಡಿಸಲು ಅನೇಕ ಪ್ರಯೋಗಗಳನ್ನು ಅಭ್ಯರ್ಥಿಗಳಿಗೆ ತೋರಿಸಲಾಯಿತು. ಸಮಾವೇಶವು ಉತ್ತಮ ಪ್ರತಿಕ್ರಿಯೆ ಉಂಟು ಮಾಡಿತು. ಅನೇಕ ಸ್ವಯಂ ಸೇವಕರು ಮೌಆಶಿ ತಂಡಕ್ಕೆ ಅದರ ಸಾಹಸದಲ್ಲಿ ಸೇರಲು ಒಪ್ಪಿದರು.

### ಹಾನೂರು, ಕರ್ನಾಟಕ

ಹಾನೂರಿನಲ್ಲಿ ಜನವರಿ 17ರಂದು ಶಿಕ್ಷಕರಿಗೆ ಒಂದು ಮೌಆಶಿ ತರಬೇತಿ ಶಿಬಿರ ನಡೆಸಲಾಯಿತು. ಹತ್ತಿರದ 31 ಶಾಲೆ ಮತ್ತು ಸಂಸ್ಥೆಗಳಿಂದ 12 ಅಭ್ಯಾಸಿ ಶಿಕ್ಷಕರು ಸೇರಿದಂತೆ 50 ಶಿಕ್ಷಕರು ಭಾಗವಹಿಸಿದ್ದರು. ಇದರಲ್ಲಿ ಚಾರಿತ್ರ ನಿರ್ಮಾಣ , ತಾಳ್ಮೆಯ ವೃದ್ಧಿ, ಪ್ರಾರ್ಥನೆಯ ಪ್ರಾಮುಖ್ಯತೆ ಮುಂತಾದ ವಿಷಯಗಳಿದ್ದವು. ಬೆಳಿಗ್ಗೆ 3 ಗಂಟೆ ಮತ್ತು ಮಧ್ಯಾಹ್ನ 2 ಗಂಟೆ ಅವಧಿಯ ಎರಡು ಸಮಾವೇಶಗಳಿದ್ದವು, ಅಭ್ಯಾಸಿಗಳಿಂದ ಉತ್ತಮ ಪ್ರತಿಕ್ರಿಯೆ ತೋರಿಬಂದಿತು. 'ಗುರಿಯನ್ನು ಸಾಧಿಸಲು ಸಂಕಲ್ಪ ಶಕ್ತಿಯ ಪ್ರಾಮುಖ್ಯತೆ' 'ಕಾಲ ನಿರ್ವಹಣೆ' 'ಆಧ್ಯಾತ್ಮಿಕ ಮತ್ತು ಭೌತಿಕ ಜೀವನದ ನಡುವಿನ ಸಂಬಂಧ' ಮತ್ತು 'ಮಾನವತೆಯ ಏಕತೆ'ಗಳನ್ನು ವಿವರಿಸುವ ವಿಡಿಯೊ ಪ್ರದರ್ಶನವಿದ್ದಿತು. ಶಿಕ್ಷಕರು ಧನಾತ್ಮಕವಾಗಿ ಸ್ಪಂದಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಅವರು ಇಂತಹ ಕಾರ್ಯಕ್ರಮಗಳನ್ನು ಹೆಚ್ಚಾಗಿ ನಡೆಸಲು ವಿನಂತಿಸಿದರು. ಇದರಿಂದ ಮೌಲ್ಯಾಧಾರಿತ ಪದ್ಧತಿಯನ್ನು ಮುನ್ನಡೆಸಿ ತಮ್ಮ ತಮ್ಮ ಶಾಲೆಗಳಲ್ಲಿ ಪರಿಚಯಿಸುವಂತಾಗುವುದೆಂದು ತಿಳಿಸಿದರು.

## ಯುವ ಜನತೆಗಾಗಿ ಕಾರ್ಯಕ್ರಮ, ರಾಂಚಿ

ಜನವರಿ 26 ರಂದು ಗುಜರಾತಿ ಶಾಲೆ, ರಾಂಚಿಯಲ್ಲಿ 49 ಮಂದಿ ಭಾಗವಹಿಸಿದ 14 ರಿಂದ 23 ರ ವಯೋಗುಂಪಿನವರ ವಿಚಾರ ಸಂಕಿರಣವೊಂದು ನಡೆಯಿತು. ಸಹಜ ಮಾರ್ಗದ ಪ್ರಾರ್ಥನೆಯನ್ನು ಸಹೋದರ ಎ.ಕೆ.ಲಾಲ್ ರವರು ಪರಿಚಯಿಸಿ ಅಭ್ಯರ್ಥಿಗಳನ್ನು ಮೌನವಾಗಿ ಪ್ರಾರ್ಥಿಸಲು ಹೇಳಲಾಯಿತು. ಮನೋಜ್ ತಿವಾರಿಯವರು ವ್ಯಕ್ತಿತ್ವ ಮತ್ತು ಚಾರಿತ್ರ ವಿಕಸನದ ಬಗ್ಗೆ ಉಪನ್ಯಾಸ ನೀಡಿದರು. ನೈಜ ವ್ಯಕ್ತಿತ್ವವೆಂದರೆ ಎಲ್ಲ ಮುಖವಾಡಗಳನ್ನು ಕಿತ್ತೊಗೆದು ಆಂತರ್ಯದಲ್ಲಿ ನಿಜವಾದ 'ನನ್ನನ್ನು', ದೈವೀ 'ನನ್ನನ್ನು' ಪ್ರಕಟಪಡಿಸುವುದು ಎಂಬುದು ಅವರ ಉಪನ್ಯಾಸದ ಸಾರಾಂಶವಾಗಿತ್ತು. ಸಹಜ ಮಾರ್ಗದ ಹತ್ತು ನಿಯಮಗಳ ಅನುಸರಣೆಯಿಂದ ಸ್ವಾಭಾವಿಕತೆ ಪಡೆಯುವ ಪ್ರಕ್ರಿಯೆಗೆ ನೆರವಾಗುತ್ತದೆ. ಸಹೋದರಿ ಸುನಂದ ಚೌಹಾನ್‌ರವರು ಹತ್ತು ನಿಯಮಗಳ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಿದರು ಹಾಗೂ ಅಭ್ಯರ್ಥಿಗಳನ್ನು 7 ಯುವಕರ 7 ಗುಂಪುಗಳಾಗಿ ವಿಂಗಡಿಸಿ 7 ನಿಯಮಗಳು (4 ರಿಂದ 10) ನೀಡಲಾಯಿತು. ಪ್ರತಿ ಗುಂಪಿಗೊಬ್ಬರು ನಿರ್ವಾಹಕರಿದ್ದು ಅವರು ಗುಂಪಿನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕೇಳಲಾಯಿತು. ಅನೇಕ ಸಂಗತಿಗಳನ್ನು ಚರ್ಚಿಸಿ ಪ್ರಸ್ತುತಪಡಿಸಲಾಯಿತು. ಎಲ್ಲ ಅಭ್ಯರ್ಥಿಗಳೂ ತಮ್ಮ ಅಭಿಪ್ರಾಯ ತಿಳಿಸಿದರು. ಅನೇಕರು ಪರಸ್ಪರ ಚರ್ಚೆಗೆ ಹೆಚ್ಚುವೇಳೆ ಮತ್ತು ಭವಿಷ್ಯದಲ್ಲಿ ಅಂತಹ ಹೆಚ್ಚಿನ ಕಾರ್ಯಕ್ರಮಗಳು ಬೇಕೆಂದರು.



ಶ್ರೀ ರಾಮಚಂದ್ರ ಮಿಷನ್®
ಎಕೋಸ್ ಇಂಡಿಯಾ ವಾರ್ತಾಪತ್ರ

ಜನವರಿ 2010 ಸಂಪುಟ 3 ಸಂಚಿಕೆ 1

# ಜ್ಯೋತಿ ಕೇಂದ್ರ

## ಇಂದೂರು ಆಶ್ರಮ









ಕೇಂದ್ರವು ಕೆಲವೇ ಅಭ್ಯಾಸಿಗಳೊಂದಿಗೆ ಪ್ರಾರಂಭವಾಯಿತು, ಈಗ ಸುಮಾರು 650 ನಿಯಮಿತ ಅಭ್ಯಾಸಿಗಳಿದ್ದಾರೆ. ಗುರುಗಳು ಇಂದೂರಿನ ಅಭ್ಯಾಸಿಗಳನ್ನು ಅನುಗ್ರಹಿಸಿ ಪ್ರಮುಖ ಸಮಾರಂಭಗಳನ್ನು ವ್ಯವಸ್ಥೆ ಮಾಡುವ ಸದವಕಾಶವನ್ನು ನೀಡಿರುತ್ತಾರೆ, ಅವುಗಳೆಂದರೆ, 1986 ರ ಸಂಸ್ಥಾಪಕರ ದಿನಾಚರಣೆ, 1991 ರ ಬಸಂತ ಉತ್ಸವ ಮತ್ತು 1996 ರಲ್ಲಿ ಸದ್ಗುರುಗಳ ಜನ್ಮದಿನಾಚರಣೆ.

ಇಂದೂರು ಆಶ್ರಮವು ನಗರದ ಕೇಂದ್ರ ಪ್ರದೇಶದಲ್ಲಿದೆ, ರೈಲ್ವೆ ನಿಲ್ದಾಣ ಮತ್ತು ಬಸ್ ನಿಲ್ದಾಣದಿಂದ ಸುಮಾರು 3.5 ಕಿ.ಮೀ. ದೂರವಿದ್ದು, ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಮೂಲಕ ಸುಲಭವಾಗಿ ತಲುಪಬಹುದು. 4050 ಚ. ಅಡಿ ಅಳತೆಯ ನಿವೇಶನವನ್ನು ಜುಲೈ 1992ರಲ್ಲಿ ಖರೀದಿಸಲಾಯಿತು. ಆಗಸ್ಟ್ 23, 1993 ರಂದು ಗುರುಗಳು ಸಾಂಪ್ರದಾಯಿಕವಾಗಿ ಶಿಲಾನ್ಯಾಸ ನೆರವೇರಿಸಿ ಸತ್ಸಂಗ ನಡೆಸಿದರು.

ನಿರ್ಮಾಣವು ಹದಿನೈದು ತಿಂಗಳಲ್ಲಿ ಪೂರ್ಣಗೊಂಡು ಡಿಸೆಂಬರ್ 20 ರಿಂದ 24 ರ ಅವಧಿಯಲ್ಲಿ ಉತ್ಸಾಹ ಭರಿತ ಉದ್ಘಾಟನೆ ನೆರವೇರಿತು. ಪೂಜ್ಯ ಗುರುಗಳು ಉಪಸ್ಥಿತರಿದ್ದು ಅನುಗ್ರಹಿಸಿದರು. ಅವರ ಉಪಸ್ಥಿತಿಯ ಸಂತಸದ ಸುಸಂದರ್ಭವನ್ನು ಹಂಚಿಕೊಳ್ಳಲು ವಲಯದ ಎಲ್ಲೆಡೆಯಿಂದ ಅಭ್ಯಾಸಿಗಳು ಭಾಗವಹಿಸಿದ್ದರು.

ಧ್ಯಾನ ಮಂದಿರವು 2400 ಚ. ಅಡಿಗಳ ವಿಸ್ತೀರ್ಣವಿದ್ದು ಎತ್ತರದ ಚಾವಣಿಯುಳ್ಳ ಕಾಂಕ್ರೀಟು ಕಟ್ಟಡವಾಗಿದೆ; 800 ಚ.ಅಡಿಗಳ ನಡುವಣ ಅಂತಸ್ತನ್ನು ಒಳಗೊಂಡಿದೆ. ಆಶ್ರಮವು ಯುಕ್ತ ಯೋಜನೆಯದಾಗಿದ್ದು ಅಭ್ಯಾಸಿಗಳ ಅಗತ್ಯತೆಗಳನ್ನು ಪೂರೈಸುತ್ತದೆ; ಎರಡನೆ ಮಹಡಿಯಲ್ಲಿ ಪಾಕಶಾಲೆ ಮತ್ತು ಭೋಜನಶಾಲೆ, ಶೌಚಾಲಯ ಕಟ್ಟಡ, ನೆಲಮಹಡಿಯಲ್ಲಿ ಚಿಕ್ಕ ತೋಟಗಳಿವೆ. ನಡುವಣ ಮಹಡಿಯಲ್ಲಿ ಒಂದು ಚಿಕ್ಕ ಕಚೇರಿ, ಗ್ರಂಥ ಭಂಡಾರ ಮತ್ತು ಪುಸ್ತಕ ಮಳಿಗೆಗಳಿವೆ.

1990 ಮತ್ತು 2002 ರ ನಡುವೆ ಗುರುಗಳು ಆಗಾಗ್ಗೆ ಭೇಟಿ ನೀಡಿ ಇಂದೂರಿನ ಅಭ್ಯಾಸಿಗಳ ಮೇಲೆ ಪ್ರೀತಿ ಹರಿಸಿದ್ದಾರೆ. ಕೇಂದ್ರವು ಒಂದೇ ಸಮನೆ ಬೆಳೆದು ಅಭ್ಯಾಸಿಗಳ ಸಂಖ್ಯೆ ಹೆಚ್ಚಾದಂತೆ ಆಶ್ರಮದಲ್ಲಿ ಸ್ಥಳದ ಕೊರತೆಯಾಯಿತು. ಸುದೈವದಿಂದ ಪಕ್ಕದ 4050 ಚ. ಅ. ವಿಸ್ತೀರ್ಣದ ನಿವೇಶನವು ದೊರೆತು ಏಪ್ರಿಲ್ 28, 2004 ರಂದು ಖರೀದಿಸಲಾಯಿತು. 2007 ರಲ್ಲಿ ಹೊಸ ಮಂದಿರವನ್ನು ಹಳೆಯ ಮಂದಿರಕ್ಕೆ ಸೇರಿಸಿ, ಸ್ಥಳದ ಸೂಕ್ತ ಬಳಕೆಯಾಗುವಂತೆ ಒಂದೇ ಅಂಕಣವಾಗಿ ನಿರ್ಮಿಸಲಾಯಿತು. ಫೆಬ್ರವರಿ 18, 2009 ರಂದು ಉದ್ಘಾಟನಾ ಸಮಾರಂಭದಲ್ಲಿ ಸುಮಾರು 2000 ಅಭ್ಯಾಸಿಗಳು ಉಪಸ್ಥಿತರಿದ್ದರು.

ಮನೋಹರವೂ, ಪ್ರಶಾಂತವೂ ಆಗಿರುವ ಆಶ್ರಮದ ಪರಿಸರವು ಅಭ್ಯಾಸಿಗಳ ಚಟುವಟಿಕೆಗಳನ್ನು ಚುರುಕುಗೊಳಿಸುತ್ತದೆ. ಕ್ರಮವಾಗಿ ನಡೆಸಲಾಗುವ ಬುಧವಾರ ಮತ್ತು ಭಾನುವಾರದ ಸತ್ಸಂಗಗಳೊಂದಿಗೆ ಶುಕ್ರವಾರ ಬೆಳಿಗ್ಗೆ ಸಹ ಸತ್ಸಂಗವಿರುತ್ತದೆ. ಮಕ್ಕಳಿಗಾಗಿ ಮತ್ತು ಶಿಕ್ಷಕರಿಗಾಗಿ ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣದ ಕಾರ್ಯಕ್ರಮಗಳು, ವಲಯ ಮಟ್ಟದ ಅಭ್ಯಾಸಿ ತರಬೇತಿ ಕಾರ್ಯಕ್ರಮ, ಮುಕ್ತ ಸಭೆಗಳು, ಸಾಧನ ಪರಿಚಯಾತ್ಮಕ ತರಬೇತಿ, ಪ್ರಬಂಧ ಸ್ಪರ್ಧೆ ಮುಂತಾದ ಚಟುವಟಿಕೆಗಳು ಕ್ರಮಶಃ ನಡೆಯುತ್ತಿರುತ್ತವೆ. ಪೂಜ್ಯ ಗುರುಗಳ ಮಾರ್ಗದರ್ಶನದಂತೆ ಮೌಅಶಿ ಚಟುವಟಿಕೆಗಳನ್ನು ಇಂದೂರು ಕೇಂದ್ರವು ಚಟುವಟಿಕೆಯಿಂದ ನಿರ್ವಹಿಸುತ್ತಿದೆ. ಕಳೆದ 10 ವರ್ಷಗಳಿಂದ ಮಕ್ಕಳಿಗಾಗಿ ಬೇಸಿಗೆ ಶಿಬಿರ ಏರ್ಪಡಿಸಲಾಗುತ್ತಿದೆ. ಪ್ರಮುಖ ಕೇಂದ್ರವಾಗಿರುವ ಇಂದೂರು, ಉಪಕೇಂದ್ರಗಳ ಅಭ್ಯಾಸಿಗಳಿಗೆ ಗುರುತಿನ ಚೀಟಿ ಸಿದ್ಧತೆ, ಸಮಾರಂಭಗಳಿಗೆ ನೋಂದಣಿ, ಮಿಷನ್ನಿನ ಸಾಹಿತ್ಯ ಮತ್ತು ಪ್ರಕಟನೆಗಳನ್ನು ಒದಗಿಸುವುದು ಇತ್ಯಾದಿಯಾಗಿ ಕಾರ್ಯನಿರ್ವಹಿಸುತ್ತದೆ.

ಪ್ರಾರಂಭದಲ್ಲಿ ಅಭ್ಯಾಸಿಗಳು ಅನುಭವವಿಲ್ಲದವರಾದುದರಿಂದ ಹೇಗೆ ಕೆಲಸ ಮಾಡಬೇಕೆಂಬ ಅರಿವಿಲ್ಲದೆ ಗುರುಗಳು ಭೇಟಿಯ ಸಮಯದಲ್ಲಿ ಅನಾನುಕೂಲತೆಗಳನ್ನು ಅನುಭವಿಸಬೇಕಾಯಿತು. ಆದಾಗ್ಯೂ ಅವರು ಆಗಾಗ್ಗೆ ಕೇಂದ್ರಕ್ಕೆ ಸಂತೋಷದಿಂದ ಭೇಟಿ ನೀಡಿ ಆಶ್ರಮವನ್ನು ಇಂದಿರುವಂತೆ ಮಾಡಿರುತ್ತಾರೆ. ತಮ್ಮ ಭೇಟಿ, ಸ್ವಯಂಸೇವಕರ ತಂಡವನ್ನು ತಯಾರು ಮಾಡುವುದು, ಕೆಲಸಗಳನ್ನು ವಹಿಸುವುದು, ಸುತ್ತಮುತ್ತಲಿನ ಕೇಂದ್ರಗಳಿಂದ ಅಭ್ಯಾಸಿಗಳನ್ನು ಆಹ್ವಾನಿಸುವುದು, ಸ್ವಯಂ ಸೇವಕರೊಂದಿಗೆ ಕೆಲಸ ಮಾಡುವುದು, ಅವರೊಂದಿಗೆ ಭೋಜನ, ವಸತಿ ವ್ಯವಸ್ಥೆ , ಆಹಾರ ಮತ್ತು ಸಾರಿಗೆಯನ್ನು ನಿಭಾಯಿಸುವುದು ಎಲ್ಲವನ್ನೂ ತಾವೇ ಸ್ವತಃ ನಿಯೋಜಿಸಿ ಕೈಗೊಳ್ಳುತ್ತಿದ್ದರು. ಅವರು ಅಭ್ಯಾಸಿಗಳನ್ನು ವೇದಿಕೆಗೆ ಕರೆದು ಅವರು ಮಾತನಾಡುವುದನ್ನು ಆಲಿಸಿ ನಂತರ ಮಾತನಾಡುವ ಸೂಕ್ತರೀತಿಯನ್ನು ಕಲಿಸಲು ತಾವೇ ಮಾತನಾಡುತ್ತಿದ್ದರು. ಅವರು ಮುಕ್ತ ಸಭೆಗಳನ್ನು ನಡೆಸಿ ನಗರದ ಗಣ್ಯ ವ್ಯಕ್ತಿಗಳನ್ನು ಭೇಟಿಮಾಡಿ ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು.



ಈ ಜ್ಯೋತಿ ಕೇಂದ್ರವು ಅಭ್ಯಾಸಿಗಳಿಗೆ ಮತ್ತು ಆಧ್ಯಾತ್ಮಿಕ ಉತ್ಕಾಂಕ್ಷಿಗಳಿಗೆ ದಾರಿ ದೀಪವಾಗಿದ್ದು ಅವರುಗಳ ಜೀವನದಲ್ಲಿ ಅವರ ದಿವ್ಯ ಪ್ರಕಾಶವನ್ನು ಪಸರಿಸುತ್ತಿದೆ.



© 2009 Shri Ram Chandra Mission ("SRCM"). All rights reserved. “Shri Ram Chandra Mission", "Sahaj Marg", "SRCM", “Constant Remembrance” and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.